ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು
ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ, ಕಲಬುರಗಿ

# ಸೇವಾವಾಣಿ

ಅಕ್ಟೋಬರ್ 2024








October
2024

## "ಮಾನಸಿಕ ಕಾಯಿಲೆಯಿಂದ ಗುಣಮುಖರಾದ ಫಲಾನುಭವಿಗಳಿಗೆ ಕುರಿ ಕೋಳಿ ವಿತರಣೆ ಕಾರ್ಯಕ್ರಮ"



**ಪುಜ್ಯ ರಾಬರ್ಟ್ ಮಿರಾಂದಾ**
ಗುಲಬರ್ಗಾ ಧರ್ಮಧ್ಯಕ್ಷರು

**ವಂ. ಫಾ॥ ವಿಕ್ಟರ್ ವಾಸ್**
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ, ಕಲಬುರಗಿ

ಆರ್ಬಿಟ್ ಸಂಸ್ಥೆಯಲ್ಲಿ ಸೆಪ್ಟೆಂಬರ್ 28ರಂದು ಗುಲ್ಬರ್ಗ ಧರ್ಮಕ್ಷೇತ್ರದ ಧರ್ಮಾಧಿಕಾರಿಗಳಾದ ಡಾಕ್ಟರ್ ಮೈಕಲ್ ಮಿರಂದ ಅವರು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು, ಸಮುದಾಯದಿಂದ ತಳ್ಳಲ್ಪಟ್ಟಂತ ಮಾನಸಿಕ ಅಸ್ವಸ್ಥರಿಗಾಗಿ ಆರ್ಬಿಟ್ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದ್ದು, ಮಾನಸಿಕ ಕಾಯಿಲೆಯಿಂದ ಗುಣಮುಖರಾದ ಫಲಾನುಭವಿಗಳಿಗೆ ಕುರಿ ಕೋಳಿ ವಿತರಣೆ ಮಾಡಲಾಗುತ್ತಿದೆ, ಅವರ ಮುಂದಿನ ಉಪಜೀವನಕ್ಕೆ ಸಹಕಾರಿಯಾಗುವಂತೆ, ಅವರು ಸದಾ ದೈಹಿಕ ಹಾಗೂ ಮಾನಸಿಕವಾಗಿ ಚಟುವಟಿಕೆಯಿಂದಿರಲು ಕುರಿ ಮತ್ತು ಕೋಳಿಗಳನ್ನು ಸಾಕುವುದು ಸಹಕಾರಿಯಾಗಿ ಪರಿಣಮಿಸುವುದು. ಸಂಸ್ಥೆ ಮಾಡುತ್ತಿರುವ ನಿಸ್ವಾರ್ಥ ಸೇವೆಗೆ ಫಲಾನುಭವಿಗಳು ಕೈಜೋಡಿಸಿದಲ್ಲಿ ಹೆಚ್ಚಿನ ರೀತಿಯಿಂದ ಪರಿಣಾಮಕಾರಿಯಾಗಿ ಫಲಿತಾಂಶ ನಿರೀಕ್ಷಿಸಬಹುದು ಎಂದು ತಮ್ಮ ಹಿತನುಡಿಗಳನ್ನು ನುಡಿದರು. ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಒಂದನೀಯ ಫಾದರ್ ವಿಕ್ಟರ ವಾಸ್ ಮಾತನಾಡಿ, ಸಂಸ್ಥೆಯ ಸುಮಾರು 30 ವರ್ಷಗಳಿಂದ ಸಮಾಜ ಸೇವಾ ಕಾರ್ಯದಲ್ಲಿ ನಿರತವಾಗಿದ್ದು, ಕಳೆದ 2018 ರಿಂದ ಮಾನಸಿಕ ಅಸ್ವಸ್ಥರ ಪುನರವಸತಿಕರಣಕ್ಕಾಗಿ ಸಂಸ್ಥೆ ದುಡಿಯುತ್ತಿದೆ, ಮಾನಸಿಕ ಕಾಯಿಲೆಯಿಂದ ಗುಣಮುಖರಾದ ಫಲಾನುಭವಿಗಳಿಗೆ ಕುರಿ ಹಾಗೂ ಕೋಳಿಯನ್ನು ವಿತರಿಸಲಾಗುತ್ತಿದೆ, ಈ ಮೂಲಕ ಫಲಾನುಭವಿಗಳು ಉತ್ತಮ ಬದುಕನ್ನು ಕಟ್ಟಿಕೊಂಡು ಸ್ವಾವಲಂಬಿಯಾಗಿ ಬದುಕಬೇಕೆಂಬುದು ಸಂಸ್ಥೆಯ ಉದ್ದೇಶವಾಗಿದೆ ಎಂದು ನುಡಿದರು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಒಂದನೀಯ ಫಾದರ್ ವಿಜಯಕುಮಾರ್, ನವಜೀವನ ಕಾರ್ಯಕ್ರಮದ ಸಂಯೋಜಕರಾದ ಪ್ರವೀಣ, ಆಪ್ತ ಸಮಾಲೋಚಕರಾದ ಅರುಣ್ ಕೋಟೆ, ರವಿ ಚಳಕಾಪುರೆ ಹಾಗೂ ಸಿಬ್ಬಂದಿ ವರ್ಗದವರು ಪ್ರಸ್ತುತವಿದ್ದು ಕಾರ್ಯಕ್ರಮವನ್ನು ಉತ್ತಮವಾಗಿ ನಡೆಸಿಡಿದರು. ಸ್ವಾಗತ ಶ್ರೀಮತಿ ಪ್ರೀತಿ, ವಂದನಾರ್ಪಣೆ ಶ್ರೀಮತಿ ಮಮತಾ, ನಿರೂಪಣೆ ಶ್ರೀ ಅರುಣ್ ಕುಮಾರ್ ರಂಜೇರಿಯವರು ನಡೆಸಿಕೊಟ್ಟರು.









orbit humnabad
Orbit Bidar
@orbitbidar330
www.orbitbidar.in
+91 8660968063
+91 8971119914
Orbitbidar93@gmail.com

NH65, Near Railway Station Road, Humnabad 585330

# "ನವಜೀವನ (ಎ.ಪಿ.ಎಫ್) ಕಾರ್ಯಕ್ರಮ"

## "ಸರಕಾರಿ ಪ್ರೌಢ ಶಾಲೆಯಲ್ಲಿ ಮಾನಸಿಕ ಆರೋಗ್ಯದ ಕುರಿತು ಅರಿವು"



ಸೆಪ್ಟೆಂಬರ್ 28ರಂದು ಚಿಟಗುಪ್ಪ ತಾಲೂಕಿನ ಮುತ್ತಂಗಿ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ, ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮ ಹಾಗು ಅಜೀಂ ಪ್ರೇಮ್ ಜಿ ರವರ ಸಂಯುಕ್ತ ಆಶ್ರಯದಲ್ಲಿ. ಪ್ರೌಢ ಶಾಲೆಯ ಮಕ್ಕಳಿಗೆ ಮಾನಸಿಕ ಆರೋಗ್ಯದ ಕುರಿತು ಅರಿವು ಮೂಡಿಸುತ್ತ, ಆರೋಗ್ಯ ಎಂದರೆ ದೈಹಿಕವಾಗಿ, ಮಾನಸಿಕವಾಗಿ ಹಾಗೂ ಸಾಮಾಜಿಕವಾಗಿ ಸದೃಢವಾಗಿದ್ದಾಗ ಮಾತ್ರ ಅಂತಹ ವ್ಯಕ್ತಿಗೆ ಆರೋಗ್ಯವಂತ ಎಂದು ಹೇಳುವರು. ವ್ಯಕ್ತಿಯಲ್ಲಿ ನ್ಯೂನತೆಗಳು ಕಂಡು ಬಂದಾಗ ಅನಾರೋಗ್ಯಸ್ಥಾ ಎನ್ನುವರು. ಇಂದು ನಾವು ಮಾನಸಿಕ ಆರೋಗ್ಯದ ಕುರಿತು ತಿಳಿದುಕೊಳ್ಳಲಿದ್ದೇವೆ, ಸಹಜ ಜೀವನದಲ್ಲಿ ಆಘಾತಕೊಳಗಾಗಿ ಮಾನಸಿಕ ಆರೋಗ್ಯದಲ್ಲಿ ಅನಾರೋಗ್ಯ ಕಂಡುಬಂದಲ್ಲಿ ಅಂತಹ ವ್ಯಕ್ತಿ ಮಾನಸಿಕ ಖಿನ್ನತೆಗೆ ಒಳಗಾಗಿದ್ದಾನೆ ಅಥವಾ ಕಾಯಿಲೆಗೆ ಒಳಗಾಗಿದ್ದಾನೆ ಎಂಬುದಾಗಿ ನಾವು ಗುರುತಿಸುತ್ತೇವೆ. ಇಂತಹ ವ್ಯಕ್ತಿ ವಿಚಿತ್ರ ವರ್ತನೆಯನ್ನು ಹೊಂದಿ ತನ್ನ ದೈನಂದಿನ ಜೀವನದಲ್ಲಿ ಸಮಸ್ಯೆಯನ್ನು ಅನುಭವಿಸುತ್ತಿರುತ್ತಾನೆ. ಒಂದು ವೇಳೆ ತಮ್ಮ ಸುತ್ತಲಿನ ಮನೆಗಳಲ್ಲಿ ಓಣಿಯಲ್ಲಿ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರು ಕಂಡುಬಂದಲ್ಲಿ ಸಂಸ್ಥೆಯ ಸಹಾಯವಾಣಿ ಸಂಖ್ಯೆಗೆ 9036664271 ಕರೆ ಮಾಡುವ ಮೂಲಕ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ಪಡೆಯಬಹುದು ಎಂದು ತಿಳಿಸಿದರು. ಶಾಲೆಯ ಮುಖ್ಯ ಗುರುಗಳಾದ ಶ್ರೀಮತಿ ವಿಜಯಕಲಾ ಹಾಗೂ ಸಿಬ್ಬಂದಿ ವರ್ಗದವರು ಮತ್ತು ಶಾಲೆಯ ಮಕ್ಕಳು ಉಪಸ್ಥಿತರಿದ್ದು ಈ ಅರಿವಿನ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು. ಕಾರ್ಯಕರ್ತ ಶ್ರೀ ಹನುಮಂತ್ ಅವರು ಧನ್ಯವಾದಗಳು ಕೋರಿದರು.

ವರದಿಗಾರರು:– ಹಣಮಂತ

## "ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ"



ಸೆಪ್ಟೆಂಬರ್ 13ರಂದು ಚಿಟಗುಪ್ಪ ತಾಲೂಕಿನ ಮನ್ನಾಎಖೇಳಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಮಕ್ಕಳಿಗೆ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್‌ಕುಮಾರ್ ಅವರು ಮಕ್ಕಳಿಗೆ ಮಾನಸಿಕ ಆರೋಗ್ಯದ ಕುರಿತು ಮಾಹಿತಿ ನೀಡಿದರು. ಆರೋಗ್ಯ, ಮಾನಸಿಕ ಆರೋಗ್ಯದ ಕುರಿತು ಮತ್ತು ಮಾನಸಿಕ ಕಾಯಿಲೆ ಹೇಗೆ ಬರುತ್ತದೆ ಮತ್ತು ಕಾಯಿಲೆ ಬಂದಾಗ ಮೂಢನಂಬಿಕೆಗೆ ಬಲಿಯಾಗದು ಇದು ಒಂದು ಮೆದುಳಿನ ಕಾಯಿಲೆಯಾಗಿದೆ ಎಂದು ತಿಳಿದುಕೊಂಡು, ಸೂಕ್ತ ವೈದ್ಯರ ಸಲಹೆ ಪಡೆದು ಇತರ ರೋಗಗಳಂತೆ ಗುಣ ಪಡಿಸಬಹುದೆಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 60 ಮಕ್ಕಳು ಭಾಗವಹಿಸಿದ್ದರು.

ವರದಿಗಾರರು:– ಅರುಣಕುಮರ ಎಸ್

## "ಮಾನಸಿಕ ಅಸ್ವಸ್ಥರ ಸರ್ವೇ, ಗ್ರಾಮಸ್ಥರಿಗೆ ಕರಪತ್ರಗಳನ್ನು ನೀಡಿ ಜಾಗೃತಿ"



ಸೆಪ್ಟೆಂಬರ್ 13ರಂದು ಹುಮ್ನಾಬಾದ್ ತಾಲೂಕಿನ ವರವಟ್ಟಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯಿಂದ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಮಹಾದೇವಿ ರವರು ವರವಟ್ಟಿ (ಕೆ) ಗ್ರಾಮದಲಿ, ಮಾನಸಿಕ ಅಸ್ವಸ್ಥ ಸರ್ವೇ ಮಾಡಿದರು. ಮಾನಸಿಕ ಸಂಸ್ಕೃತಿಯ ಕುರಿತು ಕರಪತ್ರಗಳನ್ನು ಗ್ರಾಮಸ್ಥರಿಗೆ ಕೊಟ್ಟು, ಇಂಥ ಲಕ್ಷಣವುಳ್ಳವರು ನಿಮ್ಮಲ್ಲಿ ಯಾರಾದರೂ ಕಂಡುಬಂದರೆ, ತಜ್ಞ ಮನೊವೈದ್ಯರಿಂದ ತಪಾಸಣೆ ಮಾಡಿಸಿ ಸೂಕ್ತ ಚಿಕಿತ್ಸೆಯನ್ನು ಒದಗಿಸಬೇಕಾಗಿ ತಿಳಿಸಲಾಯಿತು. ಪ್ರತಿ ಬುಧವಾರ ಹುಮ್ನಾಬಾದ್ ನಗರದ ಸರಕಾರಿ ಆಸ್ಪತ್ರೆಯಲ್ಲಿ ತಜ್ಞ ಮನೊವೈದ್ಯರು ಬಂದು ತಪಾಸಣೆ ಮಾಡಿ ಸೂಕ್ತ ಚಿಕಿತ್ಸೆಯನ್ನು ನೀಡುತ್ತಾರೆಂದು ಮಾಹಿತಿ ನೀಡಿದರು. ಮಾನಸಿಕ ಕಾಯಿಲೆಗೆ ಒಳಗಾದವರ ಲಕ್ಷಣಗಳ ಬಗ್ಗೆ, ಕಾರಣವಿಲ್ಲದೆ ನಗುವುದು, ಮಾಡಿದ್ದೆ ಕೆಲಸ ಪದೇ ಪದೇ ಮಾಡೋದು, ಪದೇ ಪದೇ ಕೈ ತೊಳಕುವುದು, ವಿಪರಿತ ವಿಶೇಷತ ಸಿಟ್ಟು, ಆತ್ಮಹತ್ಯೆ ಬಗ್ಗೆ ಆಲೋಚನೆ ಮಾಡುವುದು, ರಾತ್ರಿ ನಿದ್ರೆ ಬಾರದೇ ಇರುವುದು ಇಂತಹ ಲಕ್ಷಣವುಳ್ಳ ವ್ಯಕ್ತಿಗಳು ಕಂಡು ಬಂದರೆ ಕೂಡಲೇ ತಜ್ಞ ಮನೋವೈದ್ಯರನ್ನು ಸಂಪರ್ಕಿಸುವಂತೆ ತಿಳಿಸಲಾಯಿತು. ಅದಕ್ಕಾಗಿ ನಿಮ್ಮಗ್ರಾಮದಲ್ಲಿ ಮಾನಸಿಕ ಒತ್ತಡಕ್ಕೆ ಒಳಗಾದ ವ್ಯಕ್ತಿಗಳು ಕಂಡು ಬಂದರೆ ನೀವು ಅವರಿಗೆ ಸಹಾಯ ಮಾಡಿರಿ ಎಂದು ಮಾಹಿತಿ ನೀಡಿದರು.

ವರದಿಗಾರರು:– ಶ್ರೀಮತಿ ಮಹಾದೇವಿ

## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”



ಸೆಪ್ಟೆಂಬರ್ 26 ರಂದು ಹುಮನಾಬಾದ್ ತಾಲೂಕಿನ ಕುಮಾರಚಿಂಚೋಳಿ ಗ್ರಾಮದ ಹಿರಿಯ ನಾಗರಿಕರಿಗೆ, ಆರ್ಬಿಟ್ ಸಂಸ್ಥೆ ಹುಮನಾಬಾದ್ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ, ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪೂಜಾ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆ, ಅದರ ಲಕ್ಷಣಗಳ ಕುರಿತು ಮಾಹಿತಿ ನೀಡಿದರು. ಮಾನಸಿಕ ಕಾಯಿಲೆ ಬಂದರೆ ಭಯಪಡುವ ಅವಶ್ಯಕತೆಇಲ್ಲ, ಯಾಕೆಂದರೆ ಇತರ ಕಾಯಿಲೆಗಳಂತೆ ಇದುಕೂಡಒಂದು ಮೆದುಳಿನ ಕಾಯಿಲೆಯಾಗಿದೆ ಇದಕ್ಕೆ ಸೂಕ್ತ ಚಿಕಿತ್ಸೆಕೊಡಿಸುವುದರ ಮೂಲಕ ಕಾಯಿಲೆ ಗುಣಪಡಿಸಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 18 ಓಣಿಯ ಜನರು ಭಾಗವಹಿಸುವ ಮೂಲಕ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.

ವರದಿಗಾರರು:– ಶ್ರೀಮತಿ ಪೂಜಾ

## “ಸರ್ಕಾರಿ ಪ್ರೌಢ ಶಾಲೆಯ ಮಕ್ಕಳಿಗೆ ಮಾನಸಿಕ ಅಸ್ವಸ್ಥರ ಬಗ್ಗೆ ಜಾಗೃತಿ ಕಾರ್ಯಕ್ರಮ”



ಸೆಪ್ಟೆಂಬರ್ 19 ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ (ಕೆ) ಗ್ರಾಮದ, ಸರ್ಕಾರಿ ಪ್ರೌಢ ಶಾಲೆಯ ಮಕ್ಕಳಿಗೆ ಮಾನಸಿಕ ಅಸ್ವಸ್ಥರ ಬಗ್ಗೆ ಜಾಗೃತಿ ಕಾರ್ಯಕ್ರಮ ಮಾಡಲಾಯಿತು. ಈ ಕಾರ್ಯಕ್ರಮವು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದ ಆರ್ಬಿಟ್ ಸಂಸ್ಥೆಯಿಂದ ಈ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಪ್ತ ಸಮಾಲೋಚಕರಾದ ಶ್ರೀ ರವಿ ಅವರು ಭಾಗವಹಿಸಿದ್ದರು. ಶ್ರೀಮತಿ ಮಹಾದೇವಿ, ಶಾಲೆಯ ಮುಖ್ಯ ಗುರುಗಳಾದ ಶ್ರೀಮತಿ ಸಂಗಮ, ಚಬಮ್ಮಣಿ ಭಾಗವಹಿಸಿದ್ದರು. ಮಕ್ಕಳಿಗೆ ಮಾನಸಿಕ ಅಸ್ವಸ್ಥರ ಲಕ್ಷಣಗಳು. ಮತ್ತು ಕಾಯಿಲೆಗೆ ಕಾರಣಗಳ ಬಗ್ಗೆ ತಿಳಿಸಲಾಯಿತು. ಮಾನಸಿಕ ಅಸ್ವಸ್ಥರನ್ನು ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಗೆ ಕಳಿಸಬಹುದು, ಅಲ್ಲಿ ಪ್ರತಿ ಬುಧವಾರ ಬೆಳಿಗ್ಗೆ 10 ಗಂಟೆಗೆ ವೈದ್ಯರು ಬರುತ್ತಾರೆ ಅವರು 10:00 ಗಂಟೆಯಿಂದ್ 01:00ರ ವರೆಗೆ ವೈದ್ಯರು ತಪಾಸಣೆ ಮಾಡಿ ಉಚಿತವಾಗಿ ಮಾತ್ರೆಯನ್ನು ಕೊಡುತ್ತಾರೆ ಎಂದು ಮಾಹಿತಿ ನೀಡಲಾಯಿತು.

ವರದಿಗಾರರು:– ಶ್ರೀಮತಿ ಮಹಾದೇವಿ

## “ಮಾನಸಿಕ ಅಸ್ವಸ್ಥರ ಆಪ್ತ ಸಮಾಲೋಚನೆ”



ಹುಮನಬಾದ್ ತಾಲೂಕಿನ ಘಾಟ್‌ಬೋರಾಳ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರರನ್ನು ಭೇಟಿ ಮಾಡಿ, ಅಗತ್ಯ ಇರುವ ಫಲಾನುಭವಿಗಳಿಗೆ ಆಪ್ತ ಸಮಾಲೋಚನೆಗೆ ಒಳಪಡಿಸಲಾಯಿತು. ಆಪ್ತ ಸಮಾಲೋಚನೆ ಅನ್ನೋದು ಒಂದು ಪ್ರಕ್ರಿಯೆಯಾಗಿದ್ದು. ಮಾನಸಿಕ ಕಾಯಿಲೆ ಮಾನವನ ನಡುವಿನಲ್ಲಿ ಬರುವ ಮಾನಸಿಕ ಅಸ್ವಸ್ಥತೆಯ ಖಿನ್ನತೆಯಲ್ಲಿ ಕಂಡುಬರುವಂತ ಲಕ್ಷಣಗಳು, ಕಾರಣ ವಿಲ್ಲದೆ ಅಳುವುದು–ನಗುವುದು, ಖಿನ್ನೆತೆಯಲ್ಲಿ ಇರುವಂತಹ ಅಂಶಗಳು ಆತಂಕ, ಭಯಪಡವ ವರ್ತನೆಗಳು ಮಾನಸಿಕ ಆಸ್ವಸ್ಥೆಗೆ ಕಾರಣವಾಗಿದೆ. ಈ ರೀತಿ ವರ್ತನೆಗಳು ಮನಸ್ಸಿಗೆ ಹಿತವೆನಿಸುವುದಿಲ್ಲ ಆದ್ದರಿಂದ ಮಾಡಿದ ಕೆಲಸವನ್ನು ಪದೇಪದೇ ಮಾಡುತ್ತಾರೆ. ದೇವರು ಅಥವಾ ದೆವ್ವ ಬಂದಿದೆ. ಅನೇಕ ವೇಳೆಯಲ್ಲೇ ವಿಚಾರಗಳು ಎಲ್ಲರ ಬಗ್ಗೆ ಸಂಶಯ ಪಡುವುದು ಅಥವಾ ತಾನುಯಾರು ಎನ್ನುವುದು ಶ್ರೇಷ್ಠವಾಗಿರುವುದು, ಬೇರೆ ಬೇರೆ ಜನರಿಗೆ ತೊಂದರೆಗಳು ನೀಡುವುದು. ಇಂಥ ವರ್ತನೆಗಳು ಕಂಡುಬರುತ್ತವೆ.



ಇವರಿಗೆ ಆಪ್ತ–ಸಮಾಲೋಚನೆ ಮಾಡಿ ಸರಿಯಾದ ಮಾತ್ರೆಗಳು ಹಾಗೂ ಚಿಕಿತ್ಸೆಗಳ ಸಂಪೂರ್ಣ ಮಾಹಿತಿ ನೀಡಿ ಆಪ್ತ ಸಮಲೋಚನೆಗೆ ಒಳಪಡಿಸಲಾಯಿತು. ಆದ್ದರಿಂದ ಫಲಾನುಭವಿಗಳು ಹೇಳಿಕೊಳ್ಳುತ್ತಾ ಮೊದಲನೇ ಹಂತದ ಭೇಟಿ ಆಪ್ತ ಸಮಾಲೋಚನೆಯಲ್ಲಿ ಸ್ವಲ್ಪಮಟ್ಟಿಗೆ ಪರಿಚಯಿಸಲಾಯಿತು. ಇದಾದನಂತರ ಎರಡನೇ ಭೇಟಿಯಲ್ಲಿ ಅನೇಕ ವಿಚಾರಗಳನ್ನು ವ್ಯಕ್ತಪಡಿಸುತ್ತಾರೆ. ಮತ್ತು ನೋವುಗಳನ್ನು ವ್ಯಕ್ತಪಡಿಸಿರುತ್ತಾರೆ. ಕೆಲವು ಅಂಶಗಳನ್ನು ಪೋಷಕರ ಮುಂದೆ ವ್ಯಕ್ತಪಡಿಸಲಾದಂತ ವಿಷಯಗಳು ಆಪ್ತ ಸಮಾಲೋಚನೆಯಲ್ಲಿ ವ್ಯಕ್ತಪಡಿಸಿರುತ್ತಾರೆ. ಇವುಗಳನ್ನು ಯಾರು ಕೇಳದ ಸ್ಥಿತಿಯಲ್ಲಿ ಇರುವುದರಿಂದ, ಈ ಸ್ಥಿತಿಗಳನ್ನು ಪರಿಗಣಿಸಿ ಅವರಿಗೆ ಸರಿಯಾದ ಮಾರ್ಗದರ್ಶನಗಳನ್ನು ನೀಡುವುದರಿಂದ ಅನೇಕ ಮೂಡನಂಬಿಕೆ, ಮಾಟಮಂತ್ರಗಳಿಗೆ ಮೊದಲು ಬಲಿಯಾಗಿದ್ದರು, ಈ ಮುಂಚೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಸದ್ಯ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಾ ಇದ್ದಾರೆ ಆಪ್ತ ಸಮಾಲೋಚಕರಿಗೂ ಸಂಸ್ಥೆಯರವರಿಗೆ ತುಂಬು ಹೃದಯದ ಧನ್ಯವಾದಗಳು ವ್ಯಕ್ತಪಡಿಸಿರುತ್ತಾರೆ.

ವರದಿಗಾರರು:– ರವಿ ಜಿ

## “ವಿಶೇಷ ವಿಕಲಚೇತನರ ಸಂಘದ ಸಭೆ”



ಸೆಪ್ಟೆಂಬರ್ 11 ರಂದು ಹುಮನಾಬಾದ್ ತಾಲೂಕಿನ ಸೋನಕೇರ ಗ್ರಾಮದಲ್ಲಿ, ಅರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತಾಶ್ರಯದಲ್ಲಿ, ಮೈಲಾರಲಿಂಗ ವಿಶೇಷ ವಿಕಲಚೇತನರ ಸಂಘದ ಸಭೆ ಮಾಡಲಾಯಿತು. ಈ ಸಭೆಗೆ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಪ್ರವೀಣ್ ಹಾಗೂ ಕಾರ್ಯಕರ್ತೆಯಾದ ಶ್ರೀಮತಿ ಪೂಜಾ ಅವರು ಭಾಗವಹಿಸಿದರು. ಸಂಘದ 5 ಜನ ಸದಸ್ಯರು ಸಭೆಯಲ್ಲಿ ಚರ್ಚಿಸುವ ಮುಖಾಂತರ ಸರ್ಕಾರದಿಂದ ಸಿಗುವ ಸವಲತ್ತುಗಳ ಕುರಿತು ಹಾಗೂ ಯು.ಡಿ.ಐ.ಡಿ ಕಾರ್ಡ್ ಬಗ್ಗೆ ಮಾಹಿತಿ ನೀಡಿದರು.

ವರದಿಗಾರರು:– ಶ್ರೀಮತಿ ಪೂಜಾ



ಸೆಪ್ಟೆಂಬರ್ 12ರಂದು ಹುಮ್ನಾಬಾದ್ ನಗರದ ಜೆರ್ಪೆಟ್ ಕಾಲೋನಿಯಲ್ಲಿ ವಿಶೇಷ ವಿಕಲಚೇತನರ ಸಂಘದ ಸಭೆ ಮಾಡಲಾಯಿತು. ಈ ಸಭೆಯಲ್ಲಿ ನವಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಪ್ರವೀಣ್‌ಕುಮಾರ್ ಅವರು ಭಾಗವಹಿಸಿ, ಸಂಘದ ಸದಸ್ಯರಿಗೆ ಸಂಘದಗುರಿ ಮತ್ತು ಉದ್ದೇಶವನ್ನು ತಿಳಿಸಿದರು, ಸಂಘದ ಮೂಲಕ ತಮಗಿರುವ ಸಮಸ್ಯೆಗಳನ್ನು ಎದುರಿಸಿ, ತಮಗೆ ಸಿಗಬೇಕಾದ ಸೌಲಭ್ಯಗಳನ್ನು ಸಂಘದ ಮೂಲಕ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಸೌಲಭ್ಯಗಳನ್ನು ಪಡೆದುಕೊಳ್ಳಬೇಕೆಂದು ಮಾಹಿತಿ ನೀಡಿದರು.



ಸೆಪ್ಟೆಂಬರ್ 20ರಂದು ಹುಮ್ನಾಬಾದ್ ನಗರದ ಜೋಶಿ ಕಾಲೋನಿಯಲ್ಲಿ ಮಸ್ತಾನ್‌ಖಾದ್ರಿ ವಿಶೇಷ ವಿಕಲಚೇತನರ ಸಂಘದ ಸಭೆ ಮಾಡಲಾಯಿತು. ಈ ಸಭೆಯಲ್ಲಿ ಒಟ್ಟು 05 ಜನ ಮಹಿಳಾ ಸದಸ್ಯರು ಭಾಗವಹಿಸಿದ್ದರು, ಪ್ರತಿಯೊಂದು ಹಳ್ಳಿಯಲ್ಲಿ ನಡೆಯುವ ವಿಶೇಷ ವಿಕಲಚೇತನ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ದಿನಾಂಕ 21/09/2024 ರಂದು ಆರ್ಬಿಟ್ ಸಂಸ್ಥೆಯಲ್ಲಿ ಸಭೆ ಸೇರುವವರಿದ್ದಾರೆ ಆದ್ದರಿಂದ ನಮ್ಮ ಸಂಘದ ಮೂಲಕವೂ ಸಹ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಅವರು ಭಾಗವಹಿಸಿ ತರಬೇತಿಯಲ್ಲಿ ಭಾಗವಹಿಸಬೇಕೆಂದು, ಸಭೆಯಲ್ಲಿ ತೀರ್ಮಾನ ತೆಗೆದುಕೊಂಡರು.

ವರದಿಗಾರರು:– ನೀಲಕಂಠ

## “ತಾಲೂಕು ಮಟ್ಟದ ಅಂಗವಿಕಲರ ಗುಂಪು ರಚನೆ ಮಾಡುವ ಕಾರ್ಯಕ್ರಮ”



ಸೆಪ್ಟೆಂಬರ್ 21ರಂದು ಹುಮ್ನಾಬಾದ್ ಪಟ್ಟಣದ ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಹಾಗೂ ವಿಕಲಚೇತನರ ಗುಂಪುಗಳಿಂದ ಅಧ್ಯಕ್ಷ ಕಾರ್ಯದರ್ಶಿಗಳನ್ನು ಗುರುತಿಸಿ ಅವರನ್ನು ತಾಲೂಕು ಮಟ್ಟದ ಅಂಗವಿಕಲರ ಗುಂಪು ರಚನೆ ಮಾಡುವ ಉದ್ದೇಶದಿಂದ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಸ್ಥೆಯ ತಾಲೂಕ ಸಂಯೋಜಕರಾದ ಶ್ರೀ ಪ್ರದೀಪ್‌ರವರು ಮಾತನಾಡುತ್ತಾ ವಿಕಲಚೇತನರು ಅವರಿಗೆ ದೊರೆಯುವಂತಹ ಸೌಲಭ್ಯಗಳ ಕುರಿತು ತಾವರಿತು, ಸಂಘಟಿತರಾಗಿ ತಮ್ಮ ಹಕ್ಕುಗಳಿಗಾಗಿ ತಾವೇ ಹೋರಾಡಬೇಕು. ಒಂದು ವೇಳೆ ದೌರ್ಜನ್ಯಗಳನ್ನು ಎದುರಿಸುವ ಸಂದರ್ಭದಲ್ಲಿ ಎಲ್ಲಾ ಸಂಘದ ಸದಸ್ಯರು ಒಟ್ಟು ಗೂಡಿ ಸಂಘಟನೆ ಮಾಡುವುದರ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ತರಬೇತಿಯಲ್ಲಿ ಸಂಕ್ಷಿಪ್ತವಾಗಿ ತಿಳಿಸಿದರು. ಒಟ್ಟು 70 ಜನ ಅಂಗವಿಕಲರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು. ಹಾಗೂ ತಾಲೂಕ ಅಂಗವಿಕಲರ ಸಂಘವನ್ನು ರಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ನವಜೀವನ ಕಾರ್ಯಕ್ರಮದ ಸಿಬ್ಬಂದಿ ವರ್ಗದವರು ಹಾಗೂ ಸಂಸ್ಥೆಯ ನಿರ್ದೇಶಕರು ಪ್ರಸ್ತುತವಿದ್ದರು.



ವರದಿಗಾರರು:– ಶ್ರೀಮತಿ ಪ್ರೀತಿ

# "ಮಹಿಳ ಸಬಲೀಕರಣ ಕಾರ್ಯಕ್ರಮಗಳು"

## "ಅತ್ಯಾಚಾರ ದೌರ್ಜನ್ಯದ ವಿರುದ್ದ ಧ್ವನಿ ಎತ್ತಿ ನಿಲ್ಲಿ"



ಸೆಪ್ಟೆಂಬರ್ 24 ರಂದು ಆರ್ಬಿಟ್ ಸಂಸ್ಥೆಯಲ್ಲಿ ಮಹಿಳಾ ಸಬಲೀಕರಣ ಯೋಜನೆಯ ತಾಲೂಕ ಒಕ್ಕೂಟದ ಸಭೆಯನ್ನು ಮೇಲ್ವಿಚಾರಣ ಭೇಟಿ ಮಾಡಲು ಮಹಿಳಾ ಸಬಲೀಕರಣ ಯೋಜನೆಯ ರಾಜ್ಯಸಂಯೋಜಕರಾದ ಶ್ರೀಮತಿ ಲಯನ ಆಗಮಿಸಿದರು. ಜನಶಕ್ತಿ ಮಹಿಳಾ ತಾಲೂಕ ಒಕ್ಕೂಟದ ಸಭೆಯಲ್ಲಿ ಹಾಜರಿರುವ ಸದಸ್ಯರಿಗೆ ಮಹಿಳಾ ಸಬಲೀಕರಣ ಯೋಜನೆ ಗುರಿ ಉದ್ದೇಶಗಳ ಕುರಿತು ಮಾತನಾಡುತ್ತಾ, ಎರಡನೇ ಉದ್ದೇಶಕ್ಕೆ ಸಂಬಂಧ ಪಟ್ಟಂತೆ ಮಹಿಳೆಯರ ಮೇಲೆ ಆಗುವ ಅತ್ಯಾಚಾರ ದೌರ್ಜನ್ಯದ ವಿರುದ್ಧ ಧ್ವನಿಎತ್ತಿ ನಿಲ್ಲಲು ನಾವೆಲ್ಲರೂ ನಮ್ಮ ನಮ್ಮ ಕುಟುಂಬಗಳಿಂದಲೇ ಪ್ರಾರಂಭಿಸೋಣ ಹಾಗೂ ಸಮುದಾಯದಲ್ಲಿ ಆಗುವಂತಹ ಇಂತಹ ಕೃತ್ಯಗಳನ್ನು ಖಂಡಿಸಿ ಎಲ್ಲಾ ಸರ್ಕಾರದ ಇಲಾಖೆಗಳಿಗೆ ಮನವಿ ಪತ್ರ ನೀಡುವ ಮೂಲಕ ಒತ್ತಡ ಇರಬೇಕೆಂಬುದಾಗಿ ಸೂಚಿಸಿದರು. ಈ ತಾಲೂಕ ಒಕ್ಕೂಟದ ಸಭೆಯಲ್ಲಿ 9 ಮಹಾಸಂಗದ ಪದಾಧಿಕಾರಿಗಳು ಭಾಗವಹಿಸಿ ತಾಲೂಕು ಒಕ್ಕೂಟದ ಗುರಿಉದ್ದೇಶಗಳ ಬಗ್ಗೆ ಅರಿತುಕೊಂಡರು. ಸಭೆಯಲ್ಲಿ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದು ಮಹಾಸಂಗಗಳು ನಿರ್ವಹಿಸುತ್ತಿರುವ ಕಾರ್ಯವೈಕರಿಯ ಕುರಿತು ವಿವರಿಸಿದರು.

ವರದಿಗಾರರು:- ಶ್ರೀಮತಿ ರೀಟಾ

## "ಸ್ವ-ಉದ್ಯೋಗದಲ್ಲಿ ತೋಡಗಿದ ಮಹಿಳೆ"



ಶ್ರೀಮತಿ ಲಕ್ಷ್ಮಿಇವರು ಹುಮ್ನಾಬಾದ್ ತಾಲೂಕಿನ ವಡ್ಡನಕೇರಾ ಗ್ರಾಮದ ನಿವಾಸಿಯಾಗಿದ್ದು, ಈ ಹಿಂದೆ ಕೂಲಿ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯ ಸ್ವ ಸಹಾಯ ಸಂಘಕ್ಕೆ ಸೇರುವ ಅವಕಾಶ ಸಿಕ್ಕಿತ್ತು. ಆರ್ಬಿಟ್ ಕಾರ್ಯಕರ್ತರ ಸಲಹೆ ಮತ್ತು ಮಾರ್ಗದರ್ಶನದ ಮೇರೆಗೆ ಸರೋಜಿನಿ ಸಂಘದ ಸದಸ್ಯತ್ವವನ್ನು ಪಡೆದುಕೊಂಡರು, ಪರಿಣಾಮವಾಗಿ ಸ್ವ-ಉದ್ಯೋಗದ ಬಗ್ಗೆ ತಿಳಿದುಕೊಂಡು ಒಂದು ಆಕಳನ್ನು ಖರೀದಿ ಮಾಡಿದರು, ಒಂದು ಆಕಳಿನಿಂದ ಇಂದು ಇವರ ಹತ್ತಿರ 16 ಆಕಳುಗಳಾಗಿ ಪರಿವರ್ತಿಸಿದರು. ಜೊತೆಗೆ ಕುರಿ ಸಾಕಾಣಿಕೆ ಸಹ ಮಾಡುತ್ತಿದ್ದರು. ಇದಕ್ಕೆಲ್ಲ ಕಾರಣ ಆರ್ಬಿಟ್ ಸಂಸ್ಥೆಯ ಮಾರ್ಗದರ್ಶನ ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಸ್ವ-ಉದ್ಯೋಗ ಮಾಡುತ್ತಿರುವುದರಿಂದ ಆರ್ಥಿಕ ಸ್ಥಿತಿ ಉತ್ತಮವಾಗಿದೆ, ಇದರಿಂದ ನನ್ನ ಮಕ್ಕಳ ಶಿಕ್ಷಣ ಹಾಗೂ ಮನೆಯ ಜವಾಬ್ದಾರಿ ನೋಡಿಕೊಳ್ಳುವುದು ಸುಲಭವಾಗಿದೆ. ಇಷ್ಟೆಲ್ಲ ಸಹಾಯ ಮಾಡಿದ ಆರ್ಬಿಟ್ ಸಂಸ್ಥೆಯ ನಿರ್ದೇಶಕರಿಗೂ ಹಾಗೂ ನಮಗೆ ಸೂಕ್ತ ಮಾರ್ಗದರ್ಶನ ನೀಡಿದ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆಯರಿಗು ನನ್ನ ಪರವಾಗಿ ಹಾಗೂ ಕುಟುಂಬದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು ಸಲ್ಲಿಸುತ್ತೇನೆ.

ವರದಿಗಾರರು:- ಶ್ರೀಮತಿ ಅಮೀತಾ

## "ಕ್ಯಾನ್ಸರ್ ಜಾಗೃತಿ ಕುರಿತು ಕಿರು ನಾಟಕದ ಮುಖಾಂತರ ಅರಿವಿನ ಕಾರ್ಯಕ್ರಮ"



ಸೆಪ್ಟೆಂಬರ್ 23ರಂದು ಯರಂಡಿ ಗ್ರಾಮದ ಮಾದರಿ ಪ್ರೌಢ ಶಾಲೆಯಲ್ಲಿ ಕ್ಯಾನ್ಸರ್ ಬಗ್ಗೆ ಕಿರು ನಾಟಕದ ಮುಖಾಂತರ ಅರಿವಿನ ಕಾರ್ಯಕ್ರಮ ಮಾಡಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಸಿಸ್ಟರ್ ಪ್ರಾರ್ಥನಾ ಹಾಗೂ ತಂಡದವರು ಭಾಗವಹಿಸಿದರು. ಈ ಕಾರ್ಯಕ್ರಮದಲ್ಲಿ ಶಿಕ್ಷಕರು ಹಾಗೂ ಮಕ್ಕಳು ಸೇರಿದಂತೆ 120 ಕ್ಕಿಂತ ಹೆಚ್ಚಿನ ಜನರಿದ್ದರು. ಈ ಕಿರು ನಾಟಕದ ಮುಖಾಂತರ ಯುವಕರು ದುಶ್ಚಟಗಳಿಗೆ ಬಲಿಯಾಗದೆ ಉತ್ತಮ ಆರೋಗ್ಯಯುತವಾದ ಜೀವನ ನಡೆಸಬೇಕೆಂದು ಸಂದೇಶ ನೀಡಿದರು. ಅರಿವಿನ ನಾಟಕ ವೀಕ್ಷಿಸಿದ ಶಿಕ್ಷಕರು ಹಾಗೂ ಮಕ್ಕಳು ತಮ್ಮ ಸಮುದಾಯ ಹಾಗೂ ಮನೆಗಳಲ್ಲಿ ಇದರ ಕುರಿತು ಮಾಹಿತಿ ನೀಡುವುದರೊಂದಿಗೆ ಜಾಗೃತಿ ಮೂಡಿಸುತ್ತೇವೆ ಎಂದು ತಿಳಿಸಿದರು. ಮನೆಯ ಹೊರಗಡೆ ಸಿಗುವಂತ ಆಹಾರಗಳಾದ ಕರೀದ ಪದಾರ್ಥಗಳು ರಾಸಾಯನಿಕ ಬಣ್ಣ ಬಳಕೆ ಮಾಡಿರುವ ಪದಾರ್ಥಗಳನ್ನು ಸೇವಿಸುವುದಿಲ್ಲ ಎಂದು ತಿಳಿಸಿದ್ದಾರೆ.

ವರದಿಗಾರರು:- ಶ್ರೀಮತಿ ಚಂದ್ರಕಲಾ ಮತ್ತು ಸಿಸ್ಟರ್. ಪದ್ಮಾ

## "ತಾಲೂಕು ಒಕ್ಕೂಟದ ಗುರಿ ಮತ್ತು ಉದ್ದೇಶಗಳ ಹಾಗೂ ಪರಿಶೀಲನ ಭೇಟಿ"






ಸೆಪ್ಟೆಂಬರ್ 25ರಂದು ಭಾಲ್ಕಿ ತಾಲೂಕಿನ ಜನಜಾಗೃತಿ ತಾಲೂಕ ಒಕ್ಕೂಟ ಸಭೆಯನ್ನು ರಾಜ್ಯ ಸಂಯೋಜಿಕಿಯಾದ ಶ್ರೀಮತಿ ಲಯನ ರವರು ಪರಿಶೀಲನ ಭೇಟಿ ಮಾಡಿದ್ದರು. ಸಭೆಯಲ್ಲಿ ಮಹಿಳೆಯರ ಗುರಿಏನೆಂದು ಪ್ರಶ್ನೆ ಮಾಡುತ್ತಾ, ತಾಲೂಕು ಒಕ್ಕೂಟದ ಗುರಿ ಮತ್ತು ಉದ್ದೇಶಗಳನ್ನು ತಿಳಿಸಿದರು. ಉದ್ದೇಶ 1ರ ಪ್ರಕಾರ ಏಪ್ರಿಲ್ 2026ರ ಅಂತ್ಯದೊಳಗೆ ಕರ್ನಾಟಕದಲ್ಲಿನ 768 ಹಳ್ಳಿಗಳಿಂದ ಕರ್ತವ್ಯ ಬದ್ಧ ಅರ್ಪಣಾ ಮನೋಭಾವದ 7500 ನಾಯಕಿಯರು ಸಾಮಾಜಿಕ, ಆರ್ಥಿಕ, ರಾಜಕೀಯ, ಸಂಸ್ಕೃತಿಕ, ತಾಂತ್ರಿಕ ಹಾಗೂ ಪರಿಸರ ಕ್ಷೇತ್ರಗಳಲ್ಲಿ ಸಮಸ್ಯೆಗಳನ್ನು ಹೇಗೆ

ಕೈಗೆತ್ತಿಕೊಳ್ಳುವುದರ ಮೂಲಕ ಇನ್ನೂ ಮುಂದುವರೆದು 70000 ಬಡ ಮಹಿಳೆಯರು ಮತ್ತು ಅವರ ಕುಟುಂಬದವರು ಯಾವರೀತಿ ಸರ್ಕಾರದ ಪ್ರಯೋಜನವನ್ನು ಪಡೆಯುತ್ತಿದ್ದಾರೆ ಎಂದು ತಿಳಿಸಬೇಕು. ನಿವು ಸಹ ಪ್ರತಿಯೊಂದು ಪ್ರಯೋಜನಗಳನ್ನು ಪಡೆಯಬೇಕೆಂದು ತಿಳಿಸಿದರು, ಮಹಿಳೆಯರ ಮೇಲೆ ಆಗುವುದು ದೌರ್ಜನ್ಯ ಮತ್ತು ಅತ್ಯಾಚಾರದ ಕುರಿತು ಮಾತನಾಡಿ, ಯಾವರೀತಿ ಸುರಕ್ಷಿತವಾಗಿರಬಹುದು ಹಾಗೂ ಕಾನೂನಿನ ನೆರವನ್ನು ಪಡೆಯಬಹುದೆಂದು ತಿಳಿಸಿದರು. ಒಕ್ಕೂಟದ ಮುಖಾಂತರ ಮನವಿಯ ಪತ್ರಗಳನ್ನು ವಿವಿಧ ಇಲಾಖೆಗಳಿಗೆ ಸಲ್ಲಿಸಿ, ದೌರ್ಜನವನ್ನು ತಡೆಗಟ್ಟಲೇಬೇಕೆಂದು ಮನವಿ ಪತ್ರಗಳ ಮುಖಾಂತರ ಒತ್ತಡ ಹೇರುವಂತೆ ಮಾಹಿತಿ ನೀಡಿದರು.

ವರದಿಗಾರರು:- ಶ್ರೀಮತಿ ಸುಜಾತಾ

## "ಮಹಾಸಂಗವು ಸಂಘಟನೆ ಬಲವನ್ನು ತೋರಿಸಿಕೊಳ್ಳಬೆಕು"



ಸೆಪ್ಟೆಂಬರ್ 26ರಂದು ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆಯಾದ ಶ್ರೀಮತಿ ಸವಿತಾ ರವರು ಗಾಂಧಿ ಮಹಾಸಂಗದ ಸಭೆಯನ್ನು ಆಯೋಜಿಸಿದರು. ಸಭೆಯಲ್ಲಿ ಮಹಿಳೆಯರಿಗೆ, ರಾಜ್ಯ ಸಂಯೋಜಕೀಯಾದ ಶ್ರೀಮತಿ ಲಯನಾ ಅವರು ಭೇಟಿ ಮಾಡಿ ಮಹಾಸಂಗದ ಗುರಿಉದ್ದೇಶ ಹಾಗೂ ಮಹಿಳಾ ಸಬಲೀಕರಣ ಯೋಜನೆಯ ಗುರಿಉದ್ದೇಶಗಳೆನೆಂದು ವಿವರಿಸಿದರು, ಸಂಘ, ಮಹಾಸಂಗ ತಾಲೂಕು ಮತ್ತು ಜಿಲ್ಲಾ ಒಕ್ಕೂಟಗಳಲ್ಲಿ ಅನೇಕ ವಿಷಯಗಳ ಕುರಿತು ಚರ್ಚೆಮಾಡಿ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಮಹಾಸಂಗವು ಸಂಘಟನೆ ಬಲವನ್ನು ತೋರಿಸಿಕೊಡುತ್ತದೆ, ಅಂದರೆ ಗ್ರಾಮದ ಸಮಸ್ಯೆಗಳು ಸಿಸಿ ರಸ್ತೆ, ಚರಂಡಿ ನಿರ್ಮಾಣ, ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲಸ ಸಿಗದೇ ಇರುವಂತಹ ಸಮಯದಲ್ಲಿ ಇಂತಹ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಮಹಾಸಂಗ ನೆರವಾಗುತ್ತದೆ. ಮಹಿಳಾಭಿವೃದ್ಧಿ ಅಂದರೆ ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹೀಗೆ ಎಲ್ಲಾ ಕ್ಷೇತ್ರದಲ್ಲಿ ಮುಂದೆ ಬರಬೇಕು. ನಾಯಕಿಯರಾಗಿ ಬೆಳೆಯಬೇಕು ನಿಮ್ಮ ಸಮಸ್ಯೆಗಳನ್ನು ನಿವೇ ಪರಿಹಾರ ಕಂಡುಕೊಳ್ಳಲು ಶಕ್ತರಾಗಬೇಕು. ಮತ್ತು ಅನೇಕ ಕಡೆಗಳಲ್ಲಿ ತರಬೇತಿಗಳನ್ನು ಹಮ್ಮಿಕೊಂಡಿರುವಾಗ ತಾವುಗಳು ಅಂತಹ ತರಬೇತಿಗಳಲ್ಲಿ ಭಾಗವಹಿಸಿ ಹೆಚ್ಚಿನ ಜ್ಞಾನವನ್ನು ಪಡೆದುಕೊಂಡು ಇತರರಿಗೆ ತಿಳಿಸಲು ಪ್ರಯತ್ನಿಸಬೇಕು, ಮತ್ತು ಮಹಿಳೆಯರ ಮೇಲೆ ಆಗುವಂತಹ ದೌರ್ಜನ್ಯಗಳ ಕುರಿತು ಧ್ವನಿ ಎತ್ತಿ ನಿಲ್ಲುವ ಮಹಿಳೆಯರು ತಾವಾಗಬೇಕು ಎಂದು ತಿಳಿಸಿದರು.

ವರದಿಗಾರರು:- ಶ್ರೀಮತಿ ಸಬಿತಾ

## "ಜಾಗತಿಕ ತಾಪಮಾನ ಕುರಿತು ತರಬೇತಿ"



ಸೆಪ್ಟೆಂಬರ್ 23ರಂದು ಬಸವಕಲ್ಯಾಣ್ ತಾಲೂಕಿನ ಯರಂಡಿ ಗ್ರಾಮದಲ್ಲಿ ಜಾಗತಿಕ ತಾಪಮಾನದ ತರಬೇತಿ ಮಾಡಲಾಯಿತು. ಈ ತರಬೇತಿ ಸಂಪನ್ಮೂಲ ವ್ಯಕ್ತಿಯಾದ ಶ್ರೀಮತಿ ಚಂದ್ರಕಲಾ ಸಮಾಜ ಸೇವಕಿ ರವರು ನಡೆಸಿಕೊಟ್ಟರು. ಈ ತರಬೇತಿಯಲ್ಲಿ 30 ಜನ ಸಂಘದ ಸದಸ್ಯರು ಭಾಗವಹಿಸಿದರು. ಸಮುದಾಯದ ಸ್ವಚ್ಚತೆ ಮಹತ್ವ ಹಾಗೂ ಉತ್ತಮ ಪರಿಸರವು ನಮಗೆ ಹೇಗೆ ಸಹಕಾರಿ ಎಂಬುದರ ಕುರಿತು ವಿಸ್ತಾರವಾಗಿ ಮಾಹಿತಿ ನೀಡಿದರು. ಈ ತರಬೇತಿಯು ಪಡೆದುಕೊಂಡ ಸಂಘದ ಸದಸ್ಯರು ನಾವು ನಮ್ಮ ಮನೆ ಹಾಗೂ ಗ್ರಾಮದ ಸುತ್ತಮುತ್ತಲ್ಲಿನ ಪ್ರದೇಶಗಳನ್ನು ಸ್ವಚ್ಛವಾಗಿಡಲು ಪ್ರಯತ್ನಿಸುತ್ತೇವೆ ಎಂದು ತಿಳಿಸಿದರು. ಜೊತೆಗೆ ಅಧಿಕವಾಗಿ ಸಸಿಗಳನ್ನು ನೆಡುವ ಮೂಲಕ ಹಸಿರಿಕರಣಕ್ಕೆ ಹೆಚ್ಚಿನ ಮೊತ್ತವನ್ನು ನೀಡುತ್ತೇವೆ ಎಂದು ಪ್ರಮಾಣ ಮಾಡಿದರು.

ವರದಿಗಾರರು:- ಶ್ರೀಮತಿ ಚಂದ್ರಕಲಾ

## "ಸಂಘರ್ಷ ನಿರ್ವಹಣೆ ತರಬೇತಿ"




ಸೆಪ್ಟೆಂಬರ್ 6ರಂದು ಭಾಲ್ಕಿ ತಾಲೂಕಿನ ಸಿದ್ದೇಶ್ವರ ಗ್ರಾಮದ 'ಮಹಿಳಾ ಶಕ್ತಿ ಸಂಘ'ಕ್ಕೆ ಸಂಘರ್ಷ ನಿರ್ವಹಣೆ ತರಬೇತಿಯನ್ನು ನೀಡಲಾಯಿತು. ಈ ತರಬೇತಿಯಲ್ಲಿ ಎಲ್ಲಾ ಸಂಘದ ಸದಸ್ಯರು ಮತ್ತು ಅಧ್ಯಕ್ಷರು ಭಾಗವಹಿಸಿದ್ದರು. ಸಂಘರ್ಷ ಎಂದರೆ ನಾಲ್ಕು ಕುಟುಂಬ ಅಥವಾ ಒಂದು ಕುಟುಂಬದಲ್ಲಿ ಕಲಹ ಅಥವಾ ಜಗಳವಾದಾಗ ಅದಕ್ಕೆ ಪರಿಹಾರ ಯಾವರೀತಿ ಕಂಡುಕೊಳ್ಳಬೇಕು ಎಂಬುದರ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ನಿರ್ವಹಣೆ ಅಂದರೆ ಸಮೂಹದಲ್ಲಿ ಅಥವಾ ಗ್ರಾಮದಲ್ಲಿ ಸಿಸಿ ರಸ್ತೆಯ ಸಮಸ್ಯೆ ಮತ್ತು ಚರಂಡಿಯ ಸಮಸ್ಯೆ ಇದ್ದಾಗ ಸಂಘದ ಅಧ್ಯಕ್ಷ ಮತ್ತು ಸದಸ್ಯರೆಲ್ಲರೂ ಸೇರಿ ಸಂಘರ್ಷಣೆ ಹಾಗೂ ಹೋರಾಟ ಮಾಡುವುದರ ಮೂಲಕ ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂಬುದಾಗಿ ತಮ್ಮ ಅಭಿಮತವನ್ನು ವ್ಯಕ್ತಪಡಿಸಲಾಯಿತು. ಸಂಘರ್ಷಣೆ ಬಗ್ಗೆ ಸಂಘದ ಮಹಿಳೆಯರು ಮಾಹಿತಿಯನ್ನು ತಿಳಿದುಕೊಂಡರು.

ವರದಿಗಾರರು:- ಶ್ರೀಮತಿ ಪ್ರಭಾವತಿ

## "ಕೌಶಲ್ಯ ಅಭಿವೃದ್ಧಿ ಪಡಿಸಿಕೊಂಡು ಫಲಾನುಭವಿಗಳಿಗೆ ಸಮಾರೋಪ ಸಮಾರಂಭ ಕಾರ್ಯಕ್ರಮ"

ಸೆಪ್ಟೆಂಬರ್ 29ರಂದು ಉಜನಿ ಹಾಗೂ ಸಂತಪೂರ ಗ್ರಾಮದ ಟೈಲರಿಂಗ್ ಹಾಗೂ ಕಂಪ್ಯೂಟರ್ ತರಬೇತಿ ಪಡೆದ ಫಲಾನುಭವಿಗಳಿಗೆ ಸಮಾರೋಪ ಸಮಾರಂಭವನ್ನು ಆಯೋಜಿಸಲಾಯಿತು. ಕಾರ್ಯಕ್ರಮವನ್ನು ಫಾದರ್ ಸುನಿಲ್ ಅನರಾದೆ ನಿರ್ದೇಶಕರು ಕ್ರಿಸ್ತರಾಜರ ದೇವಾಲಯ ಉಜಿನಿ. ಫಾದರ್ ವಿಜಯ್ ಸಹಾಯಕ ನಿರ್ದೇಶಕರು ಆರ್ಬಿಟ್ ಸಂಸ್ಥೆ ಹುಮ್ನಾಬಾದ. ಫಾದರ್ ಕ್ರಿಸ್ಟೋಫರ್ ಸಹಾಯಕ ನಿರ್ದೇಶಕರು ಕ್ರಿಸ್ತರಾಜರ ದೇವಾಲಯ ಉಜಿನಿ. ಸಿಸ್ಟರ್ ರೀಮಾ ದೀಪಾಲಯ ಸಂಸ್ಥೆ ಮುಖ್ಯಸ್ಥರು ಸಂತಪುರ್. ಸಿಸ್ಟರ್ ಕವಿತಾ ಪ್ರೇಮಾಂಜಲಿ ಶಾಲೆ ಉಜಿನಿ. ಸಿಸ್ಟರ್ ಲಿನೆಟ್ ದೀಪಾಲಯ ಸಮಾಜ ಸೇವಾ ಸಂಸ್ಥೆ ನಿರ್ದೇಶಕರು ಸಂತಪುರ್, ಮಲ್ಲಪ್ಪ ಗೌಡ ವಿಜಯವಾಣಿ ಪತ್ರಕರ್ತರು ಹಾಗೂ ಸುಭಾಷ್ ಮನಕರೆ ಸಂಯೋಜಕರು ಕೌಶಲ್ಯ ಅಭಿವೃದ್ಧಿ ತರಬೇತಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ. ಇವರುಗಳು ಉದ್ಘಾಟಿಸಿದರು. ಫಾದರ್ ಸುನಿಲ್ ಮಾತನಾಡಿ ತಮ್ಮಲ್ಲಿರುವ ಕೌಶಲ್ಯವನ್ನು ಅಭಿವೃದ್ಧಿ ಪಡಿಸಿಕೊಂಡು ತಮ್ಮ ಮುಂದಿನ ಜೀವನದಲ್ಲಿ ಟೈಲರಿಂಗ್ ಕೌಶಲ್ಯವನ್ನು ತಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸುವಂತಹ ಸಾಧನವಾಗಿ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು. ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯಕುಮಾರ್ ರವರು ಆರ್ಬಿಟ್ ಸಂಸ್ಥೆಯು ಮಾಡುತ್ತಿರುವ ಸೇವೆಗಳ ಕುರಿತು ಟೈಲರಿಂಗ್, ಕಂಪ್ಯೂಟರ್ ತರಬೇತಿ ಪಡೆದಂತಹ 'ಫಲಾನುಭವಿಗಳು ಸ್ವಾವಲಂಬಿ ಜೀವನವನ್ನು ನಡೆಸಲು ನಿಮಗೆ ಈ ತರಬೇತಿ ಬಹಳ ಉಪಯುಕ್ತವಾಗಿದೆ, ಇದರಿಂದ ತಮ್ಮ ಜೀವನವನ್ನು ರೂಪಿಸಿಕೊಳ್ಳುವಂತೆ ತಿಳಿಸಿದರು. ಪ್ರಮಾಣ ಪತ್ರಗಳನ್ನು ನೀಡುವ ಮುಖಾಂತರ ಕಾರ್ಯಕ್ರಮವನ್ನು ಕೊನೆಗೊಳಿಸಲಾಯಿತು.

ವರದಿಗಾರರು:- ಸುಭಾಷ್





# “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

## “ಸದೃಢ ಆರೋಗ್ಯಕ್ಕೆ ಪೌಷ್ಟಿಕ ಆಹಾರ”




ಸೆಪ್ಟೆಂಬರ್ 24ರಂದು ಹುಮ್ನಾಬಾದ್ ತಾಲೂಕಿನ ಜನತಾನಗರ ಗ್ರಾಮದಲ್ಲಿ "ಸದೃಢ ಆರೋಗ್ಯಕ್ಕೆ ಪೌಷ್ಟಿಕ ಆಹಾರ" ಮುಖ್ಯ ಆರೋಗ್ಯವೇ ಭಾಗ್ಯ ಆರೋಗ್ಯವಂತಹ ಮಗು ದೇಶದ ಆಸ್ತಿ, ಮಗು ಶಾರೀರಿಕವಾಗಿ, ಮಾನಸಿಕವಾಗಿ, ಭೌತಿಕವಾಗಿ, ಎಲ್ಲಾರೀತಿಯಿಂದಲೂ ಆರೋಗ್ಯಕರವಾಗಿ ಇರಬೇಕೆಂದರೆ, ಸಮಯಕ್ಕೆ ಸರಿಯಾಗಿ ಪೌಷ್ಟಿಕ ಆಹಾರವನ್ನು ಸೇವಿಸಬೇಕು. ಪೌಷ್ಟಿಕ ಆಹಾರವು ಜೀವನಕ್ಕೆ ಅಗತ್ಯವಾದ ಪೋಷಕಾಂಶಗಳನ್ನು ಕೋಶಗಳಿಗೆ ಮತ್ತು ಅಂಗಾಂಗಗಳಿಗೆ ಒದಗಿಸುತ್ತದೆ. ಹೀಗಾಗಿ ನಮ್ಮ ಹಿರಿಯರು ಮಾತು ಬಲ್ಲವನಿಗೆ ಜಗಳವಿಲ್ಲ ಊಟ ಬಲ್ಲವನಿಗೆ ರೋಗವಿಲ್ಲ ಎಂಬ ಗಾದೆಯಂತೆ, ಮಗು ಹುಟ್ಟಿನಿಂದ ಆರಂಭವಾಗಿ ಬೆಳವಣಿಗೆಯ ಪ್ರತಿ ಹಂತದಲ್ಲಿ ಪೌಷ್ಟಿಕ ಆಹಾರ ಅತ್ಯಗತ್ಯ. ಆರೋಗ್ಯಕರ ಆಹಾರ ಪದ್ಧತಿಯ ಮೂಲಕ ಅನೇಕ ಅನಾರೋಗ್ಯಗಳನ್ನು ಹೊಡೆದು ಓಡಿಸಬಹುದು. ಪೌಷ್ಟಿಕಾಂಶಗಳಲ್ಲಿ ಒಟ್ಟು ಏಳು ವರ್ಗಗಳಿವೆ. ಕೊಬ್ಬು, ಖನಿಜಗಳು ಪ್ರೋಟೀನ್, ಕಾರ್ಬೋಹೈಡ್ರೈ, ವಿಟಮಿನ್ ಹಾಗೂ ನೀರು. ಈ ಪೋಷ್ಟಿಕಾಂಶಗಳನ್ನು ದೊಡ್ಡಮಟ್ಟದ ಪೌಷ್ಟಿಕಾಂಶ ಹಾಗೂ ಸಣ್ಣ ಮಟ್ಟದ ಪೌಷ್ಟಿಕಾಂಶಗಳು ಎಂದು ವಿಭಾಗಿಸಬಹುದು. ದೊಡ್ಡಮಟ್ಟದ ಪೌಷ್ಟಿಕಾಂಶಗಳೆಂದರೆ ಕಾರ್ಬೋಹೈಡ್ರೇಟ, ಕೊಬ್ಬು, ಪ್ರೋಟೀನ್ ಹಾಗೂ ನೀರು ಸಣ್ಣಮಟ್ಟದ ಪೌಷ್ಟಿಕಾಂಶಗಳು ಎಂದರೆ ಖನಿಜಗಳು ಮತ್ತು ವಿಟಮಿನ್‌ಗಳು ಎಂದು ಹೇಳಬಹುದು. ಪ್ರೋಟೀನಗಳು ಹುಟ್ಟುವ ಮಗುವಿನಿಂದ ಹಿಡಿದು ವಯಸ್ಸಾದ ವೃದ್ಧರ ವರೆಗೂ ಪ್ರೋಟೀನ್ ಅಂಶ ತುಂಬಾ ಮುಖ್ಯ. ಇದು ದೇಹದ ಮಾಂಸ ಖಂಡಗಳ ಬೆಳವಣಿಗೆಯಲ್ಲಿ, ಮೂಳೆಗಳು ಸದೃಢತೆಯಲ್ಲಿ, ಬುದ್ಧಿಶಕ್ತಿಗಳ ಚುರುಕುತನದಲ್ಲಿ, ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಬಲ್ಲ ದೇಹದಲ್ಲಿ ಪ್ರಕ್ರಿಯೆಯನ್ನು ಉತ್ತೇಜಿಸುವಲ್ಲಿ ಪ್ರೋಟೀನ್ ಬಹು ಮುಖ್ಯ ಪಾತ್ರವಹಿಸುತ್ತದೆ.

ವರದಿಗಾರರು:– ಶ್ರೀಮತಿ ಮಮತಾ

## “ವಿಕಲತೆ ಮಕ್ಕಳು ಜನಿಸದಂತೆ ಪೋಷಕರು ಜಾಗರೂಕರಾಗಬೇಕು”

ಸಪ್ಟೆಂಬರ್ 14ರಂದು ಹುಮ್ನಾಬಾದ್ ತಾಲೂಕಿನ ಮಾಣಿಕ್‌ನಗರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಬಗ್ಗೆ ಶ್ರೀ ಮಾಣಿಕ್‌ಪ್ರಭು ಪ್ರೌಢ ಶಾಲೆಯಲ್ಲಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಈ ಕಾರ್ಯಕ್ರಮವು ಬೆಳವಣಿಗೆಯಿಂದ ಕುಂಠಿತ ಹೊಂದಿರುವ ಮಕ್ಕಳಿಗಾಗಿ ಕೆಲಸ ಮಾಡುತ್ತದೆ. ವಿಕಲತೆ ಮಕ್ಕಳು ಜನಿಸದಂತೆ ಪೋಷಕರು ಜಾಗರೂಕರಾಗಬೇಕು. ರಕ್ತ ಸಂಬಂಧದಲ್ಲಿ ವಿವಾಹವಾದರೆ ಕುಂಠಿತ ಮಕ್ಕಳು ನೂರಕ್ಕೆ 75 ಪ್ರತಿಶತ ಹುಟ್ಟುವ ಸಂಭವವಿರುತ್ತದೆ. ಅದೇರೀತಿಯಾಗಿ ಅಂತಹ ಮಕ್ಕಳು ಕಂಡು ಬಂದರೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ಮಕ್ಕಳಿಗೆ ಚಟುವಟಿಕೆ ಮಾಡಿಸುವ ಮುಖಾಂತರ ಬದಲಾವಣೆ ತರಲು ಪ್ರಯತ್ನಿಸಲಾಗುವುದು. ಕಡಿಮೆ ತೂಕ ಹೊಂದಿರುವಂತಹ ಮಕ್ಕಳಿಗೆ ಆರ್ಬಿಟ್ ಸಂಸ್ಥೆ ಕಡೆಯಿಂದ ಮಕ್ಕಳಲ್ಲಿ ಶಕ್ತಿ ಬರುವ ಹಾಗೆ ಪೌಷ್ಟಿಕ ಆಹಾರ ಕೊಡಲಾಯಿತು. ಬೆಳವಣಿಗೆಯಿಂದ ಕುಂಠಿತ ಹೊಂದಿದ ಮಕ್ಕಳಿಗೆ ಭವಿಷ್ಯವನ್ನು ರೂಪಿಸಿಕೊಳ್ಳಲು ಯು.ಡಿ.ಐ.ಡಿ ಕಾರ್ಡ್ 85 ಜನ ಮಕ್ಕಳಿಗೆ ಮಾಡಿಸಿ ಕೊಡಲಾಯಿತು. ಸಂಸ್ಥೆಯಿಂದ ಮಕ್ಕಳಿಗೆ ಸಾಧನೆ ಸಲಕರಣೆ ಕೊಟ್ಟು ಚಟುವಟಿಕೆ ಮಾಡಲಿದ್ದೇವೆ ಎಂದು ಹೇಳುತ್ತಾ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಯ ಕಿರಣ್‌ಕುಮಾರ್ ಕುಲಕರಣಿ ಸರ್ ಅವರು, ಶಾಲೆಯ ಶಿಕ್ಷಕರು, ಮಕ್ಕಳು, ಸೇರಿ ಒಟ್ಟು 140 ಜನಭಾಗವಹಿಸಿ ಕಾರ್ಯಕ್ರಮದ ಮಾಹಿತಿ ಪಡೆದುಕೊಂಡರು.

ವರದಿಗಾರರು:– ಶ್ರೀಮತಿ ಕವೀತಾ





# "ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ"

## "ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವಿನ ಕಾರ್ಯಕ್ರಮ"



ಸೆಪ್ಟೆಂಬರ್ 25ರಂದು ಭಾಲ್ಕಿ ತಾಲೂಕಿನ ವರವಟ್ಟಿ ಗ್ರಾಮದ ಅಂಗನವಾಡಿ ಕಾರ್ಯಕರ್ತೆಯರಿಗೆ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಕುಮಾರ್ ರಅವರಿಂದ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು ಮೂಡಿಸಲಾಯಿತು. ಮಾನಸಿಕ ಆರೋಗ್ಯ, ಮಾನಸಿಕ ರೋಗ, ಮಾನಸಿಕ ರೋಗಕ್ಕೆ ಕಾರಣ, ಮಾನಸಿಕ ಕಾಯಿಲೆಯ ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು. ಮಾನಸಿಕ ಕಾಯಿಲೆಯ ಬಗ್ಗೆ ಮಾಹಿತಿ ನೀಡಿಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು ಹಾಗೂ ಪ್ರತಿ ತಿಂಗಳು ಎರಡನೆ ಮಂಗಳವಾರ ಭಾಲ್ಕಿಯ ಸರಕಾರಿಆಸ್ಪತ್ರೆಯಲ್ಲಿಜಿಲ್ಲಾ ಮಾನಸಿಕ ಆರೋಗ್ಯ ಶಿಬಿರ ನಡೆಯುತ್ತದೆ ಎಂದು ಮಾಹಿತಿ ನೀಡಲಾಯಿತು. ಇದರೊಂದಿಗೆ ಕ್ಯಾನ್ಸರ್ ಕಾಯಿಲೆವು ಹೇಗೆ ಬರುತ್ತದೆ ಮತ್ತು ಅದನ್ನು ಪತ್ತೆ ಹಚ್ಚುವ ನಿಧಾನವನ್ನು ತಿಳಿಸಲಾಯಿತು. ಸೂಕ್ತ ಸಮಯದಲ್ಲಿ ಚಿಕಿತ್ಸೆ ಪಡೆದುಕೊಂಡಾಗ ಕ್ಯಾನ್ಸರ್ ರೋಗವು ಸಂಪೂರ್ಣವಾಗಿ ಗುಣಮುಖ ಹೊಂದಬಹುದು ಎಂದು ತಿಳಿಸಿದರು. ಈ ಜಾಗೃತಿ ಕಾರ್ಯದಲ್ಲಿ ಒಟ್ಟು 28 ಜನ ಅಂಗನವಾಡಿ ಕಾರ್ಯಕರ್ತೆಯರು ಅಂಗನವಾಡಿ ವ್ಯವಸ್ಥಾಪಕರು ಉಪಸ್ಥಿತರಿದ್ದು ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಂಡರು.

ವರದಿಗಾರರು:– ಕುಮಾರ

## "ಕ್ಯಾನ್ಸರ್ ಮತ್ತು ಮಾನಸಿಕ ಕಾಯಿಲೆ ಕುರಿತು ಜಾಗೃತಿ"



ಕಮಲನಗರ ತಾಲೂಕಿನ ಡೊಗಾವ್ ಗ್ರಾಮದ ಹಾವಗಿ ಸ್ವಾಮಿ ಹಿರಿಯ ಪ್ರೌಢ ಶಾಲೆಯಲ್ಲಿ ಸೆಪ್ಟೆಂಬರ್ 19 ರಂದು ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಎಲ್.ಎಲ್.ಎಲ್.ಎಫ್ ಕಾರ್ಯಕರ್ತರಾದ ಬಬನ್ ರಾಥೋಡ್ ರವರು ಕ್ಯಾನ್ಸರ್ ಮತ್ತು ಮಾನಸಿಕ ಕಾಯಿಲೆ ಕುರಿತು ಜಾಗೃತಿ ಮೂಡಿಸಿದರು. ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿ ವಿನಾಕಾರಣ ಅಳುವುದು, ನಗುವುದು, ಬೀದಿಯಲ್ಲಿ ನಡೆಯುವುದು, ಕೋಪಗೊಳ್ಳುವುದು, ಒಂಟಿತನ, ಏನನ್ನಾದರೂ ಕೇಳುವುದು ಇತ್ಯಾದಿ ಯಾವುದೇ ಲಕ್ಷಣಗಳು ಕಂಡು ಬರಬಹುದು. ಕ್ಯಾನ್ಸರ್ ಸೇರಿದಂತೆ, ಕಾಯಿಲೆ ಬಂದಾಗ ವೈದ್ಯರನ್ನು ಸಂಪರ್ಕಿಸಿ ಸರಿಯಾದ ಚಿಕಿತ್ಸೆ ಪಡೆಯಿರಿ. ಆರಂಭದಲ್ಲಿ ಕ್ಯಾನ್ಸರ್ ರೋಗವನ್ನು ಪತ್ತೆ ಹಚ್ಚುವ ಮೂಲಕ ಯಶಸ್ವಿಯಾಗಿ ಚಿಕಿತ್ಸೆ ನೀಡಬಹುದು. ಹಾಗಾಗಿ ಪ್ರತಿಯೊಬ್ಬರು ಕ್ಯಾನ್ಸರ್ ತಪಾಸಣೆಗೆ ಒಳಗಾಗಿ ತಮ್ಮನ್ನು ಪರೀಕ್ಷಿಸಿಕೊಳ್ಳಬೇಕು. ಕ್ಯಾನ್ಸರ್ ರೋಗಕ್ಕೆ ಮುಖ್ಯ ಕಾರಣಗಳು ಅತಿಯಾದ ಧೂಮಪಾನ, ಮದ್ಯಪಾನ, ಗುಟ್ಕಾ ಸೇವನೆ, ತಂಬಾಕು ಪದಾರ್ಥಗಳ ಸೇವನೆ, ಬಿಡಿ ಮತ್ತು ಸಿಗರೇಟ್ ಸೇವನೆಯಿಂದ ಕ್ಯಾನ್ಸರ್ ರೋಗಗಳು ಉಂಟಾಗುತ್ತವೆ. ನಿರ್ದಿಷ್ಟವಾಗಿ ಹೇಳುವುದಾದರೆ, ಮಹಿಳೆಯರಿಗೆ ಗರ್ಭಾಶಯದ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚು, ಮಹಿಳೆಯರಲ್ಲಿ ದೈಹಿಕವಾಗಿ ಏನಾದರೂ ವ್ಯತ್ಯಾಸವಾಗಿದೆ ಎಂದು ಕೊಂಡುಬಂದಲ್ಲಿ ತಕ್ಷಣ ವೈದ್ಯರನ್ನು ಸಂಪರ್ಕಿಸುವುದು ಉತ್ತಮ ಎಂದು ಮಾಹಿತಿ ನೀಡದರು.

ವರದಿಗಾರರು:– ಶ್ರೀ ಬಬನ್

## "ಸಮುದಾಯದಿಂದ ಅಂಚಿ ತಳ್ಳಲ್ಪಟ್ಟ ಮಾನಸಿಕ ಅಸ್ವಸ್ಥರನ್ನು ಪುನ: ಸಮುದಾಯಕ್ಕೆ ಪೂನರ್ವಸತಿಗೊಳಿಸುವುದೇ ನಮ್ಮ ಕಾರ್ಯ"



ಸೆಪ್ಟೆಂಬರ್ 27ರಂದು ಹುಲಸೂರ ತಾಲೂಕಿನ ಗಡಿಗೌಡಗಾಂವ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಆರ್ಬಿಟ್ ಸಂಸ್ಥೆ ಹಾಗೂ ಲಿವ್.ಲವ್.ಲಾಫ್ ಫೌಂಡೇಶನ್ ಸಹಯೋಗದಲ್ಲಿ, ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಅಮರ ರವರು ಮಕ್ಕಳಿಗೆ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸುತ್ತ ಮಾತನಾಡಿದರು, ಸಮುದಾಯದಿಂದ ಅಂಚಿ ತಳ್ಳಲ್ಪಟ್ಟ ಮಾನಸಿಕ ಅಸ್ವಸ್ಥರನ್ನು ಪುನ: ಸಮುದಾಯಕ್ಕೆ ಪೂನರ್ವಸತಿಗೊಳಿಸುವುದೇ ಆರ್ಬಿಟ್ ಸಂಸ್ಥೆಯ ಮುಖ್ಯಧೇಯವಾಗಿದೆ. ಆರೋಗ್ಯ ಚೆನ್ನಾಗಿರಬೇಕಾದರೆ, ದೈಹಿಕವಾಗಿ ಮಾನಸಿಕವಾಗಿ, ಶರೀರಿಕವಾಗಿ, ಮತ್ತು ಸಾಮಾಜಿಕವಾಗಿ ಆರೋಗ್ಯದಿಂದ ಇರುವುದೇ ಪರಿಪೂರ್ಣ ಆರೋಗ್ಯ, ಹೀಗೆ ಮುಂದುವರೆಸುತ್ತ ಮಾನಸಿಕ ಕಾಯಿಲೆ, ಲಕ್ಷಣಗಳು, ಕಾಯಿಲೆಗೆ ಕಾರಣಗಳು, ಅದನ್ನು ಹೇಗೆ ತಡೆಗಟ್ಟಬೇಕು? ಎಂಬುದರ ಬಗ್ಗೆ ವಿವರವಾಗಿ ಮಕ್ಕಳಿಗೆ ಜಾಗೃತಿ ಮೂಡಿಸಿ, ಮಾನಸಿಕ ಅಸ್ವಸ್ಥರನ್ನು ನಮ್ಮಂತೆ ಮನುಷ್ಯರೆಂದು ತಿಳಿದು ಸಹಾಯ ಮಾಡಲು ಮುಂದಾಗಬೇಕೆಂದು ತಿಳಿಸಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 9 ಶಿಕ್ಷಕರು ಸೇರಿ ಒಟ್ಟು 150 ವಿದ್ಯಾರ್ಥಿಗಳು ಭಾಗವಹಿಸಿದರು. ಮಾನಸಿಕ ಅಸ್ವಸ್ಥರ ಸಹಾಯವಾಣಿ ಸಂಖ್ಯೆ ಕೊಡಲಾಗಿದೆ, ಮಾನಸಿಕ ಅನಾರೋಗ್ಯದಿಂದ ಬಳಲುತ್ತಿರುವವರು ಸಂಸ್ಥೆಯ ಸಹಾಯವಾಣಿಗೆ ಕರೆ ಮಾಡುವ ಮೂಲಕ ಸೂಕ್ತ ಚಿಕಿತ್ಸೆ ಹಾಗೂ ಮಾರ್ಗದರ್ಶನ ಪಡೆಯುವುದರೊಂದಿಗೆ ಉತ್ತಮವಾಗಿ ಜೀವಿಸಬಹುದು ಎಂದು ಮಾಹಿತಿ ನೀಡಿದರು.

ವರದಿಗಾರರು:– ಅಮರ

## “ಮಾನಸಿಕ ಅಸ್ವಸ್ಥರ ಮತ್ತು ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ”



ಸೆಪ್ಟೆಂಬರ್ 18ರಂದು ಔರಾದ್ ತಾಲೂಕಿನ ಧೂಪತ್ಮಾಗಾಂವ್ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಮತ್ತು ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ನೀಡಲಾಯಿತು, ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕರ್ತರಾದ ಶ್ರೀ ಯೋಹಾನ್ ಅವರು ಉಪಸ್ಥಿತರಿದ್ದರು. ಮಾನಸಿಕ ಕಾಯಿಲೆ ವ್ಯಕ್ತಿಯ ಲಕ್ಷಣಗಳು ವಿಚಿತ್ರ ನಡುವಳಿಕೆ, ಅನಗತ್ಯವಾಗಿ ವಿಚಾರ, ಅನುಮಾನ್ ಪಡುವಂಥದ್ದು, ಅಳುವುದು, ವಿಚಿತ್ರವಾಗಿ ಮಾತನಾಡುವುದು ಇತ್ಯಾದಿ, ಈ ರೋಗಕ್ಕೆ ತುತ್ತಾದಂತ ವ್ಯಕ್ತಿಗಳಿಗೆ ಚಿಕಿತ್ಸೆ ಹಾಗೂ ಮನೋಸ್ಥೈರ್ಯ ನೀಡುವ ಮೂಲಕ ಗುಣಪಡಿಸಬಹುದು. ಕ್ಯಾನ್ಸರ್ ಕಾಯಿಲೆಯು ಯಾರಿಗೆ ಬೇಕಾದರೂ ಬರಬಹುದು ಅದು ಗಂಟಲಿನ ಕ್ಯಾನ್ಸರ್, ಚರ್ಮಕ್ಯಾನ್ಸರ್, ಜಠರಕ್ಯಾನ್ಸರ್, ಮೂಳೆ ಕ್ಯಾನ್ಸರ್ ಇತ್ಯಾದಿ. ಶರೀರದಯಾವುದೇ ಭಾಗಕ್ಕೂ ಬರಬಹುದು. ಈ ರೋಗದ ಮುನ್ಸೂಚನೆಗಳು ಮೂರು ವಾರಗಳಿಗಿಂತ ಹೆಚ್ಚು ಕಾಲ ಇರುವ ಬಾಯಿ ಅಥವಾ ನಾಲಿಗೆ ಹುಣ್ಣು, ರಕ್ತವನ್ನು ಕೆಮ್ಮುವುದು, ಮೂತ್ರ ಮಾಡುವಾಗ ರಕ್ತ ಕಾಣಿಸಿಕೊಳ್ಳುವುದು, ಈ ತರ ಏನಾದರೂ ಲಕ್ಷಣ ಕಂಡು ಬಂದಲ್ಲಿ ವೈದ್ಯರ ಸಲಹೆಯನ್ನು ಪಡೆವುದು ಸೂಕ್ತ ಎಂದು ಜಾಗೃತಿ ಮೂಡಿಸಲಾಯಿತ್ತು. ಈ ಹರಿವಿನ ಕಾರ್ಯಕ್ರಮದಲ್ಲಿ 18 ಜನ ಭಾಗವಹಿಸಿ ಮಾನಸಿಕ ಕಾಯಿಲೆ ಮತ್ತು ಕ್ಯಾನ್ಸರ್ ಕಾಯಿಲೆ ಕುರಿತು ಜಾಗೃತಿ ಹೊಂದಿದರು.

ವರದಿಗಾರರು:– ಯೋಹಾನ್ ಪಿ

## “ಸರ್ಕಾರಿ ಪ್ರೌಢ ಶಾಲೆಯ ಮಕ್ಕಳಿಗೆ ಜಾಗೃತಿ”



ಸೆಪ್ಟೆಂಬರ್ 13ರಂದು ಬೀದರ್ ತಾಲೂಕಿನ ಶ್ರೀಮಂಡಲ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಮತ್ತು ನವಜೀವನ ಎಲ್.ಎಲ್.ಎಲ್.ಎಫ್ ಸಂಯುಕ್ತಾಶ್ರಯದಲ್ಲಿ ಸಂಪನ್ಮೂಲ ವ್ಯಕ್ತಿ ಶ್ರೀ ಆನಂದ್‌ರವರು  ಮಕ್ಕಳಿಗೆ ಜಾಗೃತಿ ಮೂಡಿಸುತ್ತ ಮಾತನಾಡಿದರು, ಆರೋಗ್ಯ ಎಂದರೆ ದೈಹಿಕವಾಗಿ, ಮಾನಸಿಕವಾಗಿ, ಶರೀರಕವಾಗಿ ಮತ್ತು ಸಾಮಾಜಿಕವಾಗಿ ಉತ್ತಮ ಸ್ಥಿತಿಯಲ್ಲಿ ಇರುವುದೆ ಪರಿಪೂರ್ಣ ಆರೋಗ್ಯ. ಮಾನಸಿಕ ಅಸ್ವಸ್ಥತೆ ಎಂದರೆ, ಇದು ಒಂದು ಮೆದುಳಿನ ಕಾಯಿಲೆ, ಮೆದುಳಿನ ರಾಸಾಯನಿಕ ಕ್ರಿಯೆಯಲ್ಲಿ ಏರುಪೇರಾಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯಾಗಿ, ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟಾಗುವುದನ್ನು ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಕಾಯಿಲೆಯ ಲಕ್ಷಣಗಳು ಭಯ, ಆತಂಕ, ಖಿನ್ನತೆ, ಇತ್ಯಾದಿ ಇಂತಹ ಲಕ್ಷಣಗಳಿದ್ದರೆ, ಮನೋವೈದ್ಯರ ಬಳಿ ಚಿಕಿತ್ಸೆ ನೀಡುವುದರ ಮೂಲಕ ಗುಣಪಡಿಸಬಹುದು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರು ಕಂಡು ಬಂದಲ್ಲಿ ಅವರನ್ನು ನಿರ್ಲಕ್ಷಿಸದೆ  ಸಹಾಯ ಮಾಡುವ ಭಾವನೆ ನಿಮ್ಮದಾಗಬೇಕು ಎಂದು ಹೇಳಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ ಇಬ್ಬರು ಶಿಕ್ಷಕಿಯರು ಹಾಗೂ 38 ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.

ವರದಿಗಾರರು:– ಶ್ರೀ ಆನಂದ

## “ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು”



ಸೆಪ್ಟೆಂಬರ್ 6ರಂದು ಭಾಲ್ಕಿ ತಾಲೂಕಿನ ಚಳಕಾಪೂರ ಗ್ರಾಮದ ಶ್ರೀ ಶಿದ್ಧಾರೂಢ ಪ್ರೌಢ ಶಾಲೆ ಮಕ್ಕಳಿಗೆ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ್ ರವರಿಂದ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು ಮೂಡಿಸಲಾಯಿತು. ಮಾನಸಿಕ ಕಾಯಿಲೆ ಬಂದಾಗ ಕುಟುಂಬಸ್ಥರು ಮಾನಸಿಕ ರೋಗಿಯನ್ನು ಕರೆದುಕೊಂಡು ತಜ್ಞ ಮನೋವೈದ್ಯರನ್ನು ಸಂಪರ್ಕಿಸಬೇಕು ಹಾಗೂ ಅವರ ಸೂಚಿಸುವಂತಹ ಚಿಕಿತ್ಸೆಯನ್ನು ಪಡೆದುಕೊಳ್ಳುವಂತೆ ಮಾಹಿತಿ ನೀಡಿದರು. ಜೊತೆಯಲ್ಲಿ ಕ್ಯಾನ್ಸರ್ ಕಾಯಿಲೆಯು ಹೇಗೆ ಬರುತ್ತದೆ ಮತ್ತು ಅದನ್ನು ಪತ್ತೆ ಹಚ್ಚುವ ನಿಧಾನವನ್ನು ತಿಳಿಸಲಾಯಿತು. ಮಾನಸಿಕ ಕಾಯಿಲೆಯ ಬಗ್ಗೆ ಮಾಹಿತಿ ನೀಡಿಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು ಹಾಗೂ ಪ್ರತಿ ತಿಂಗಳು ಎರಡನೆ ಮಂಗಳವಾರ ಭಾಲ್ಕಿಯಲ್ಲಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಶಿಬಿರ ಇರುತ್ತದೆ ಎಂದು ಹೇಳಲಾಯಿತು. ಈ ಜಾಗೃತಿ ಕಾರ್ಯದಲ್ಲಿ 115 ಜನ ಶಾಲೆಯ ಮಕ್ಕಳು ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

ವರದಿಗಾರರು:– ಕುಮಾರ

## “ದೈನಂದಿನ ಚಟುವಟಿಕೆಗಳ ನಿರ್ವಹಣೆ”



ಭಾಲ್ಕಿ ತಾಲೂಕಿನ ಕಾಸರತುಗಾಂವ ಗ್ರಾಮದಲ್ಲಿ ಸೆಪ್ಟೆಂಬರ್ 21ರಂದು ಆರ್ಬಿಟ್ ಸಂಸ್ಥೆಯ ನವಜೀವನ ಲೀವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಅಡಿಯಲ್ಲಿ ದೈನಂದಿನ ಚಟುವಟಿಕೆಗಳ ನಿರ್ವಹಣೆ ಆಯೋಜಿಸಲಾಗಿದ್ದು, ಈ ತರಬೇತಿಯಲ್ಲಿ ಕುಟುಂಬದ ಸದಸ್ಯರು, ಮಾನಸಿಕ ಅಸ್ವಸ್ಥರಿಗೆ ಹಾಗೂ ಪೋಷಕರುಗಳು ಭಾಗವಹಿಸಿ ದೈನಂದಿನ ಚಟುವಟಿಕೆಯ ನಿರ್ವಹಣೆಯ ಕುರಿತು ತಿಳಿಸಲಾಯಿತು. ಕುಟುಂಬದ ಸದಸ್ಯರಿಗೆ ಮಾನಸಿಕ ಸಂಸ್ಥರನ್ನು, ಹೇಗೆ ನೋಡಿಕೊಳ್ಳಬೇಕು ಮತ್ತು ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಅವರನ್ನು ಹೇಗೆ ತೊಡಗಿಸಿಕೊಳ್ಳಬೇಕು, ಎ.ಡಿ.ಎಲ್.ಎಸ್ ಸ್ಕಿಲ್ ಮುಖಾಂತರ ಅವರನ್ನು ಚೇತರಿಸಿಕೊಳ್ಳಲು ಸಹಾಯ ಮಾಡಬೇಕು, ಪ್ರತಿನಿತ್ಯದ ಮಾತ್ರೆಗಳನ್ನು ಸೇವಿಸುವ ಪರಿ ಹಾಗೂ ಮಾತ್ರೆಗಳನ್ನು ಸರಿಯಾದ ಸಮಯಕ್ಕೆ ನೀಡುವ ಬಗ್ಗೆ, ಅದರ ಮುಖಾಂತರ ಅವರರೋಗವನ್ನು ಶೀಘ್ರ ಗತಿಯಲ್ಲಿ ಗುಣಪಡಿಸುವ ಬಗ್ಗೆ ತಿಳಿ ಹೇಳಲಾಯಿತು.

ವರದಿಗಾರರು:– ಕುಮಾರಿ ಅಶ್ವಿನಿ

## “ಮಾನಸಿಕ ಆರೋಗ್ಯದ ಕುರಿತು ಜಾಗೃತಿ”



ಸೆಪ್ಟೆಂಬರ್ 18ರಂದು ಬಸವಕಲ್ಯಾಣ ತಾಲೂಕಿನ ಮೂಡಬಿ ಗ್ರಾಮದ ಶ್ರೀ ಗೋಪಾಲ್‌ರಾವ್ ಪಾಟೀಲ್ ಪ್ರೌಢಶಾಲೆಯಲ್ಲಿ, ಮಾನಸಿಕ ಆರೋಗ್ಯ ಕುರಿತು ಜಾಗೃತಿಕ ಕಾರ್ಯಕ್ರಮವನ್ನು ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಇವರ ಸಂಯುಕ್ತ ಆಶ್ರಮದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಸುಜಾತಾ ಅವರು ಮಾತನಾಡಿ, ಮಾನಸಿಕ ಆರೋಗ್ಯದ ಕುರಿತು ಸವಿವರವಾಗಿ ಮಕ್ಕಳಿಗೆ ತಿಳಿಸುತ್ತಾ, ಈ ಮಾನಸಿಕ ಕಾಯಿಲೆಗೆ ಚಿಕಿತ್ಸೆ ಇದೆ, ಮತ್ತು ಮಾನಸಿಕ ಕಾಯಿಲೆಗೆ ಇರುವ ತಪ್ಪು ಕಲ್ಪನೆಗಳ ಬಗ್ಗೆ ಹೋಗಲಾಡಿಸಬೇಕು. ಹೀಗೆ ಅನೇಕ ರೀತಿಯ ಕಾರಣಗಳನ್ನು ಕೊಟ್ಟು ಮಕ್ಕಳಿಗೆ ಮಾನಸಿಕ ಕಾಯಿಲೆಯ ಬಗ್ಗೆ ಸರಿಯಾಗಿ ತಿಳಿಸುತ್ತಾ, ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಉಚಿತವಾದ ತಪಾಸಣೆ ಮಾಡಿಸಲಾಗುತ್ತದೆ. ಸತತವಾಗಿ ಅವರಿಗೆ ಚಿಕಿತ್ಸೆ ನೀಡಿದರೆ ಅವರು ಗುಣಮುಖರಾಗುತ್ತಾರೆ. ನಿಮ್ಮ ನಿಮ್ಮ ಹಳ್ಳಿಗಳಲ್ಲಿ ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಗಳಿದ್ದರೆ ನಮ್ಮ ಸಂಸ್ಥೆಯ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಲು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮಕ್ಕಳು ಮತ್ತು ಶಿಕ್ಷಕರು ಸೇರಿ ಒಟ್ಟು 58 ಜನರು ಭಾಗವಹಿಸಿದ್ದರು.

ವರದಿಗಾರರು:– ಅರುಣ ಏಮ್

## “ಕ್ಯಾನ್ಸರ್ ಕಾಯಿಲೆಯ ಕುರಿತು ಜಾಗ್ರತಿ”



ಸೆಪ್ಟೆಂಬರ್ 23ರಂದು ಬಸವಕಲ್ಯಾಣ ತಾಲೂಕಿನ ಗುಂಡೂರು ಗ್ರಾಮದ ಸರಕಾರಿ ಪ್ರೌಢ ಶಾಲೆಯ ಮಕ್ಕಳಿಗೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆಯಾದ ಸುಜಾತ ಅವರು ಕ್ಯಾನ್ಸರ್ ಕಾಯಿಲೆಯ ಕುರಿತು ಜಾಗ್ರತಿ ಮೂಡಿಸುತ್ತಾ ಮಾತನಾಡಿ, ಕ್ಯಾನ್ಸರ್ ಕಾಯಿಲೆಯ ಲಕ್ಷಣಗಳು ಹೇಗೆಲ್ಲ ಇರುತ್ತದೆ. ಯಾವಕಾರಣದಿಂದ ಬರುತ್ತದೆ, ಮತ್ತು ಕ್ಯಾನ್ಸರ್ ತಡೆಗಟ್ಟಲು ನಾವು ಏನು ಮಾಡಬೇಕು. ಧೂಮಪಾನ ಮತ್ತು ಮದ್ಯಪಾನ ಮಾಡಬಾರದು, ತಂಬಾಕು ಸೇವಿಸಬಾರದು, ಹೀಗೆ ದುಷ್ಪಚಟಕ್ಕೆ ಒಳಗಾಗದಂತೆ ನಾವು ಎಚ್ಚರಗೊಳ್ಳಬೇಕು. ಅಂದಾಗ ಮಾತ್ರ ಕ್ಯಾನ್ಸರ್ ತಡೆಗಟ್ಟಲು ಸಾಧ್ಯತೆ ಇದೆ. ಎಂದು ಕ್ಯಾನ್ಸರ್ ವಿರುದ್ಧವಾಗಿ ಜಾಗೃತಿ ಮೂಡಿಸಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ ಶಿಕ್ಷಕರು ಮತ್ತು ಮಕ್ಕಳು ಸೇರಿ 45 ಜನರು ಭಾಗವಹಿಸಿದ್ದರು.

ವರದಿಗಾರರು:– ಶ್ರೀಮತಿ ಸುಜಾತಾ

## “ಪತ್ತೆ ಹಚ್ಚಿದ 4 ಹೊಸ ಮಾನಸಿಕ ಅಸ್ವಸ್ಥರ ತಪಾಸಣೆ”



ಸೆಪ್ಟೆಂಬರ್ 18 ರಂದು ಬೀದರ್ ತಾಲುಕಿನ ಚೆಲ್ಲರ್ಗಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್ ಲವ್ ಲಾಫ್ ಫೌಂಡೇಶನ್ ಸಹಯೋಗದಲ್ಲಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಲ್ಲಿ, ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಅರುಣ್ ಏಮ್ ರವರು ಪತ್ತೆ ಹಚ್ಚಿದ 4 ಹೊಸ ಮಾನಸಿಕ ಅಸ್ವಸ್ಥರನ್ನು ಮನೋವೈದ್ಯರ ಬಳಿ ಚಿಕಿತ್ಸೆಗೆ ದೊರಕುವಂತೆ ಮಾಡಿದರು. ಈ ಆರೋಗ್ಯ ಕಾರ್ಯಕ್ರಮದಲ್ಲಿ ಒಟ್ಟು 10 ಜನ ಮಾನಸಿಕ ಅಸ್ವಸ್ಥರನ್ನು ಚಿಕಿತ್ಸೆಗೆ ಒಪಡಿಸಲಾಯಿತು. ಈ ಎಲ್ಲಾ ಮನಸಿಕ ಅಸ್ವಸ್ಥರನ್ನು ತಜ್ಞ ಮನೋವೈದ್ಯರಾದ ಅಮುಲ್ ಶರೀಫ್ ಅವರು ಚಿಕಿತ್ಸೆ ನೀಡಿದರು.

ವರದಿಗಾರರು:– ಅರುಣ ಏಮ್

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮಗಳು"



ಸೆಪ್ಟೆಂಬರ್ 10ರಂದು ಕಲಬುರಗಿ ನಗರ ಪ್ರದೇಶದ ಮಿಲತ್ ನಗರ ಅಂಗನವಾಡಿ ಕೇಂದ್ರ ಸಂಖ್ಯೆ 1ರಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಅರಿವು ಕಾರ್ಯಕ್ರಮ ಹಮ್ಮಿಕೋಳಳಾಗಿತ್ತು. ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆ ಶಶಿಕಲಾ ಹಾಗೂ ಅಂಗನವಾಡಿ ಸಹಾಯಕಿ ಸೇರಿ ಒಟ್ಟು 12 ಜನ ಮಹಿಳೆಯರು ಪಾಲ್ಗೂಂಡಿದ್ದರು. ಬೆಳವಣಿಗೆಯಲ್ಲಿ ಕುಂಠಿತವಿರುವ 0–6 ವರ್ಷದ ಒಳಗಿನ ಮಕ್ಕಳು, ಅಂದರೆ ಮಕ್ಕಳು 1 ವರ್ಷದವರಾದರು ಅವರಿಗೆ ಕುಳಿತ್ತುಕೂಳ್ಳಲು, ನಡೆದ್ದಾಡಲು ಬರದಿದ್ದರೆ, ಮಾತನಾಡಲು ಬರದಿದ್ದರೆ ಆ ಮಕ್ಕಳಿಗೆ ನಮ್ಮ ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪೇಮ್ ಜೀ ಫೌಂಡೇಷನ ವತಿಯಿಂದ ಚಟುವಟಿಕೆ ಮಾಡಿಸಲಾಗುವುದು. ಮಕ್ಕಳ ಬದಲಾವಣೆಗೆ ಕಾರ್ಯನಿರ್ವಹಿಸುತಿದೆ ಜೋತೆಗೆ ಸರ್ಕಾರಿ ಸೌಲಭ್ಯಗಳನ್ನು ಪಡೆಯುವ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಲಾಗುವುದು ಎಂದು ಹೇಳಿದರು.



ಸೇಪ್ಟೆಂಬರ 23ರಂದು ಕಲಬುರಗಿ ನಗರ ಪ್ರದೇಶದ ಅಬುಬಕರ ಅಂಗನವಾಡಿ ಕೇಂದ್ರ 1 ರಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತ್ತು ಅರಿವು ಕಾರ್ಯಕ್ರಮ ಹಮ್ಮಿಕೋಳಲಾಗಿತ್ತು . ಈ ಅಂಗನವಾಡಿ ಕೇಂದ್ರದ ಕಾರ್ಯಕರ್ತ ಹಾಗೂ ಸಹಾಯಕಿ ಸೇರಿ ಒಟ್ಟು 11 ಜನ ಮಹಿಳೆಯರು ಪಾಲ್ಗೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವಂತಹ 0–6 ವರ್ಷದ ಒಳಗಿನ ಮಕ್ಕಳು ಅಂದರೆ ಮಕ್ಕಳು 1 ವರ್ಷದವರಾದರು ಅವರಿಗೆ ಕುಳಿತ್ತುಕ್ಕೂಳಲು, ನಡೆದ್ದಾಡಲು ಬರದಿದ್ದರೆ, ಮಾತನಾಡಲು ಬರದಿದ್ದರೆ ಆ ಮಕ್ಕಳಿಗೆ ನಮ್ಮ ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪೇಮ್ ಜೀ ಫೌಂಡೇಷನ ವತಿಯಿಂದ ಚಟುವಟಿಕೆ ಮಾಡಿಸಲಾಗುವುದು. ಮಕ್ಕಳನ್ನು ಮುಖ್ಯವಾಹಿನಗೆ ತರಲು ಸಂಸ್ಥೆ ಕಾರ್ಯನಿರ್ವಹಿಸುತಿದ್ದೆ, ಜೋತೆಗೆ ಸರ್ಕಾರಿ ಸೌಲಭ್ಯಗಳನ್ನು ಒದಗಿಸುವುದು. ಈ ರೀತಿಯ ಮಕ್ಕಳು ಜನಿಸಲು ಕಾರಣವೇನೆಂದರೆ ಬಾಲ್ಯ ವಿವಾಹ, ರಕ್ತ ಸಂಭಂದದಲ್ಲಿ ಮದುವೆ ಆಗಿರಬಹುದು ಅಥವಾ ಗಂಡು–ಹೆಣ್ಣಿನ ನಡುವೆ ಇರುವ ವಯಸ್ಸಿನ ಅಂತರ ಸಹ ಕಾರಣವಾಗಬಹುದ್ದು ಎಂದು ತಿಳಿಸಲಾಯಿತ್ತು.



ಕಲಬುರಗಿ ನಗರದ ಗ್ರಾಮೀಣ ಪ್ರದೇಶದ ಉದನೂರ ಅಂಗನವಾಡಿ ಕೇಂದ್ರದಲ್ಲಿ ಸೆಪ್ಟೆಂಬರ್ 12 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ, ಕಲಬುರಗಿ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮೀಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಕುರಿತು ಮಾಹಿತಿಯನ್ನು ಕು.ಅನಿತಾ ಅವರು ನೀಡಿದರು. ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳು ಅಂದ್ರೆ, ಮಕ್ಕಳಲ್ಲಿರುವ ನ್ಯೂನ್ಯತೆಯನ್ನು ಕಂಡುಹಿಡಿದು ಆ ಮಕ್ಕಳಿಗೆ ಬೇಕಾಗಿರುವ ಸಾಧನಾ ಸಲಕರಣೆಯನ್ನು ನೀಡುವುದರ ಮೂಲಕ ಹಾಗೂ ಚಟುವಟಿಕೆಯನ್ನು ಮಾಡಿ ಹಾಗೂ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ದೂರಕಿಸುವಲ್ಲಿ ಸೇವಾ ಸಂಗಮ ಸಂಸ್ಥೆ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 11 ಜನ ಭಾಗವಹಿಸಿದರು. ಅಂಗನವಾಡಿ ಮೇಲ್ವಿಚಾರಕಿಯಾದ ಹೀನಾ ಮೇಡಮ್ ಹಾಗೂ ಕಾರ್ಯಕರ್ತೆಯಾದ ಶ್ರೀಮತಿ ಜಗದೇವಿ ಪಾಲಕರು ಉಪಸ್ಥಿತರಿದರು.

## "ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಪಾಲಕರ ಗುಂಪು ರಚನೆ"



ಸೆಪ್ಟಂಬರ್ 19ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ್ ರವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಬಿಕ ಶಿಕ್ಷಣದ ಯೋಜನೆಯ ಅಡಿಯಲ್ಲಿ, ಸಾವಳಗಿ ಗ್ರಾಮದ ಚೇತನ ಉಪಕೇಂದ್ರದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಪಾಲಕರ ಗುಂಪು ರಚನೆಯ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಪಂಚಾಯತ ನಿಂದ ಸಿಗುವ 5 ಪ್ರತಿಶತ ಅನುದಾನದ ಕುರಿತು ಮಾತನಾಡಿ, ಪಾಲಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಶ್ರೀಯುತ ಸದಾನಂದ ರವರು ತಿಳಿಸಿದರು.

## “ಪಾಲಕರ ಗುಂಪು ರಚನೆ”



ಸೆಪ್ಟೆಂಬರ್ 11ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ್ ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಪಾಲಕರ ಗುಂಪು ರಚನೆ ಮಾಡುವ ಕಾರ್ಯಕ್ರಮವನ್ನು ಕಲಬುರಗಿ ನಗರ ಪ್ರದೇಶದ ತಾರಾಫೈಲ್ ಅಂಗನವಾಡಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶ್ರೀಮತಿ ಶ್ವೇತಾ ಯೋಜನಾ ವ್ಯವಸ್ಥಾಪಕರು ಇವರು “ಒಗ್ಗಟಿನಲ್ಲಿ ಬಲವಿದೆ” ಆದ್ದರಿಂದ ಎಲ್ಲಾ ಪಾಲಕರನ್ನು ಒಗ್ಗೂಡಿಸುವ ಪ್ರಯುಕ್ತ ಇಂತಹ ಪಾಲಕರ ಗುಂಪು ರಚನೆ ಮಾಡಲಾಗುತ್ತದೆ. ಇದರ ಉದ್ದೇಶ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಪಾಲಕರ ಅಭಿವೃದ್ಧಿ ಮಾಡುವುದಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕು.ಅನಿತಾ ಉಪಸ್ಥಿತರಿದರು, ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳು, ಪಾಲಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಒಟ್ಟು 11 ಜನ ಭಾಗವಹಿಸುವ ಮೂಲಕ ಕಾರ್ಯಕ್ರಮದ ಮಾಹಿತಿಯನ್ನು ಪಡೆದುಕೊಂಡರು.

## “ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಬಾಳಿಗೆ ಹೊಸ ಬೆಳಕನ್ನು ಚೆಲ್ಲುತ್ತಿದೆ”



ಕಾರಿತಾಸ್ ಇಂಡಿಯಾ ಸಂಸ್ಥೆ ಸಹ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರಿಂದ, ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಅಭಿವೃದ್ಧಿಗಾಗಿ ಸೇವಾಸಂಗಮ ಸಂಸ್ಥೆ ಕಾರ್ಯನಿರ್ವಹಿಸುತ್ತಿದ್ದು, ಈ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಮೂಲತ ಕಲಬುರಗಿ ತಾಲ್ಲೂಕಿನ ನಗರ ಪ್ರದೇಶ ಮತ್ತು ಗ್ರಾಮಿಣ ಭಾಗದಲ್ಲಿ 3 ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುವ ಗ್ರಾಮಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೋಳಿಸಿದ್ದು ಈ ಕಾರ್ಯಕ್ರಮವು ಯಶ್ವಸಿಯಾಗಿ ಮುನ್ನುಗ್ಗುತ್ತಿದೆ, ಈ ಭಾಗದ ಜನರ ಮಕ್ಕಳ ಬಾಳಿಗೆ ಹೊಸ ಬೆಳಕನ್ನು ಚೆಲ್ಲುತ್ತಿದೆ. ಈ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಅನೇಕ ರೀತಿಯ ಸಮಸ್ಯೆಗಳನ್ನು ನಾವು ಎದುರುಸಿದ್ದೆವೆ. ಪ್ರಸ್ತುತ ಯೋಜನೆಯ ಆರ್ಥಿಕ ಬೆಂಬಲವನ್ನು ಅಜೀಮ್ ಪ್ರೇಮ್ ಜಿ ಫೌಂಡೇಶನ ಕಲಬುರಗಿ ಇವರು ನೀಡುತ್ತಿದ್ದಾರೆ ಎಂದು ಫಾದರ ವಿಕ್ಟರ್ ವಾಸ್‌ಸ ನಿರ್ದೇಶಕರು ಈ ಯೋಜನೆಯನ್ನು ವೀಕ್ಷಣೆ ಮಾಡಲು ಬಂದಿರುವ ಸಿಬ್ಬಂದಿಗಳಿಗೆ ಸೆಪ್ಟೆಂಬರ್ 26 ರಂದು ಸೇವಾಸಂಗಮ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ವಿಶೇಷ ಸಭೆಯಲ್ಲಿ ಹೇಳಿದರು. ಕಾರಿತಾಸ್ ಇಂಡಿಯಾ ದೆಹಲಿಯಿಂದ ಆಗಮಿಸಿದ ಜೋ, ಮತ್ತು ಸಂಗೀತಾ ಇವರು ಫರಹರತಾಬಾದ ಗ್ರಾಮದ ಬೆಳೆವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಮನೆ ಭೇಟಿ, ಪಾಲಕರೋಂದಿಗೆ ಮಾತುಕತೆ, ಚೇತನ ಉಪಕೇಂದ್ರ ಹಾಗೂ ನಗರ ಪ್ರದೇಶದಲಿರುವ ಚೇತನಾ ಕೇಂದ್ರವನ್ನು ವೀಕ್ಷಿಸುವ ಮೂಲಕ ಈ ಯೋಜನೆಯ ಕುರಿತು ಮಾಹಿತಿಯನ್ನು ಪಡೆದುಕೋಂಡರು. ಈ ಸಭೆಯಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ವ್ಯವಸ್ಥಾಪಕರು ಮತ್ತು ಕಾರ್ಯಕರ್ತರು ಭಾಗವಹಿಸಿದರು.



## “ಮಹಿಳೆಯ ಆರೋಗ್ಯವೆದೇಶದ ಭಾಗ್ಯ”



ಸೆಪ್ಟೆಂಬರ್ 2ರಂದು ಕಲಬುರಗಿ ತಾಲ್ಲೂಕಿನಲ್ಲಿ ಬರುವ ಫರಹತಬಾದ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಸೇವಾ ಸಂಗಮ ಸಂಸ್ಥೆ, ಅಜೀಂ ಪ್ರೇಮಜಿ ಫೌಂಢೇಶನ್ ಕಲಬುರಗಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಫರಹತಬಾದ ಇವರ ಸಂಯುಕ್ತ ಆಶ್ರಯದಲ್ಲಿ ಪೌಷ್ಠಿಕ ಆಹಾರ ದಿನಾಚರನೆಯನ್ನು ಹಮ್ಮಿಕೊಳ್ಳಲಾಗಿತು. ಕಾರ್ಯಕ್ರಮದಲ್ಲಿ ಶ್ರೀಮತಿ ಇಂದ್ರ ಶರ್ಮಾ ಇವರು ಮಾತನಾಡಿ, ಮಹಿಳೆಯರು ತಮ್ಮ ದಿನನಿತ್ಯ ಕಾರ್ಯದಲ್ಲಿ ಸರಿಯಾದ ಸಮಯಕ್ಕೆ ಆಹಾರ ಸೇವನೆ ಮಾಡದೆ ಇರುವುದು ಮತ್ತು ತಾವು ಸೇವಿಸುವ ಆಹಾರ ಪೌಷ್ಠಿಕಾಂಶಯುಳ್ಳ ಆಹಾರ ಎಂಬುವುದರ ಕುರಿತು ಅರಿವು ಇಲ್ಲದ ಕಾರಣ ಮಹಿಳೆಯರು ರಕ್ತ ಹಿನತೆಯ ಕೊರತೆ ಯಿಂದ ಬಳಲುತ್ತಿದ್ದಾರೆ. ಆದ್ದರಿಂದ ಮಹಿಳೆಯರು ಪ್ರತಿ ದಿನ ಹಸಿರು ತರಕಾರಿ ಮತ್ತು ಹಣ್ಣುಗಳ ಸೇವನೆ ಮಾಡಬೇಕು ಮಹಿಳೆಯರ ಅಭಿವೃದ್ಧಿ ದೇಶದ ಅಭಿವೃದ್ಧಿ ಆದ್ದರಿಂದ ನಿಮ್ಮ “ಆರೋಗ್ಯವೇ ದೇಶದ ಭಾಗ್ಯ” ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರ ಮಾತನಾಡಿ ಬೇಳವಣಿಗೆಯಲ್ಲಿ ಕುಂಠಿತ ಮಕ್ಕಳನ್ನು ಶೀಘ್ರವಾಗಿ ಪತ್ತೆ ಹಚ್ಚುವ ಮೂಲಕ ಆ ಮಕ್ಕಳಿಗೆ ಆರಂಭಿಕ ಶಿಕ್ಷಣವನ್ನು ನಿಡಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಗಂಗುಬಾಯಿ ಬಿ.ಎಚ್.ಇ.ಓ. ಪ್ರಾಥಮಿಕ ಆರೋಗ್ಯ ಕೇಂದ್ರ ಫರಹತಬಾದ ಹಾಗೂ ಶ್ರೀಮತಿ ಆಫ್ರೀನ್ ಮತ್ತು ರೀಯಾನ ಅವರು ವೇಧಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 20 ಜನ ಮಹಿಳೆಯರು ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.



## "ಪೌಷ್ಠಿಕ ಆಹಾರ ಕುರಿತು ಮಾಹಿತಿ



ಸೆಪ್ಟೆಂಬರ್ 10ರಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ, ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ ಪೌಷ್ಠಿಕ ಆಹಾರದ ಬಗ್ಗೆ ಮಾಹಿತಿ ಕಾರ್ಯಕ್ರಮವನ್ನು ಮಾಡಲಾಯಿತು. ಪೌಷ್ಠಿಕ ಆಹಾರವನ್ನು ಪ್ರತಿಯೊಬ್ಬ ಮನುಷ್ಯನಿಗೂ ಬಹಳ ಪ್ರಮುಖವಾಗಿದೆ. ಭೂಮಿಯ ಮೇಲೆ ಪ್ರತಿಯೊಂದು ಜೀವಿಗೂ ಸಹ ಆಹಾರ ಬೇಕು. ಅದರಲ್ಲಿ ಉತ್ತಮವಾದ ಮತ್ತು ಗುಣಮಟ್ಟದ ಆಹಾರವನ್ನು ಸೇವನೆ ಮಾಡಬೇಕು. ಹೆಚ್ಚಾಗಿ ಹಸಿರು ತರಕಾರಿ ಮತ್ತು ಹಣ್ಣುಗಳ ಸೇವನೆ ಮಾಡುವುದರಿಂದ ಉತ್ತಮವಾದ ಆರೋಗ್ಯವನ್ನು ಪಡೆಬಹುದು. ಎಂದು ಹಿರಿಯ ಮೇಲ್ವಿಚಾರಕಿಯಾದ ಶ್ರೀಮತಿ ಫ್ರಾಭಾವತಿ ಮಾಹಿತಿ ನೀಡಿದರು. 0–6 ವರ್ಷದ ಮಕ್ಕಳಲ್ಲಿರುವ ನ್ಯೂನ್ಯತೆ ಹೇಗೆ ಗುರುತಿಸಬೇಕೆಂದು ಶ್ರೀಮತಿ ಶಿವಕಾಂತ ಅವರು ಮಾಹಿತಿ ತಿಳಿಸಿದರು. ಈ ಒಂದು ಕಾರ್ಯಕ್ರಮದಲ್ಲಿ ಹಿರಾಪೂರ ವಲಯದ ಮೇಲ್ವಿಚಾರಕಿಯಾದ ಶ್ರೀಮತಿ ಮಲ್ಲಮ್ಮಾ ಹಾಗೂ 15 ಜನ ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದರು.



ಸೆಪ್ಟಂಬರ್ 12ರಂದು ಜಾಫರಬಾದ ಅಂಗನವಾಡಿ ಕೇಂದ್ರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಶೀಘ್ರ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ ಪೌಷ್ಠಕ ಆಹಾರದ ಬಗ್ಗೆ ಮಾಹಿತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ವ್ಯಕ್ತಿ ಹುಟ್ಟಿನಿಂದ ಆರಂಭವಾಗಿ, ಬೆಳವಣಿಗೆಯ ಪ್ರತಿ ಹಂತದಲ್ಲು ಪೌಷ್ಠಕ ಆಹಾರದ ಅವಶ್ಯಕತೆ ಇದೆ, ಅದರ ಜೊತೆಗೆ ಹಸಿ ತರಕಾರಿ, ಬೆಯಿಸಿದ ಬೆಳೆಕಾಳುಗಳು, ಹಣ್ಣು ಹಂಪಲು ಸೇವಿಸುವುದರ ಜೊತೆಗೆ ನೀರು ಕೂಡಿಯುವುದು ತುಂಬಾ ಅವಶ್ಯಕವಾಗಿದೆ, ವ್ಯಕ್ತಿಯು ಸಮಯಕ್ಕೆ ಸರಿಯಾಗಿ ಪೌಷ್ಟಿಕ ಆಹಾರ ಸೇವನೆ ಮಾಡದಿದ್ದಲ್ಲಿ, ಅಪೌಷ್ಟಿಕತೆಗೆ ಗುರಿಯಾಗಿ ನಾನಾ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ಶ್ರೀಮತಿ ಲಕ್ಷ್ಮಿ ಅವರು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 16 ಜನ ಭಾಗವಹಿಸಿ ಕಾರ್ಯಕ್ರಮದ ಸರುಪಯೋಗ ಪಡೆದುಕೊಂಡರು.

## "ಸ್ಲಂ ಪ್ರದೇಶದ ಸಂಜೆ ಶಾಲೆ ಮಕ್ಕಳಿಗೆ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮ"

ಸೆಪ್ಟೆಂಬರ್ 14ರಂದು ಕಲಬುರಗಿ ನಗರ ಪ್ರದೇಶದಲ್ಲಿ ಬರುವ ಮದರ್ ತೇರಿಸ ಸಭಾಂಗಣದಲ್ಲಿ ಸೇವಾ ಸಂಗಮ ಸಂಸ್ಥೆ ವತಿಯಿಂದ ಸ್ಲಂ ಪ್ರದೇಶದ ಸಂಜೆ ಶಾಲೆ ಮಕ್ಕಳಿಗೆ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಾಗೂ ವಿವಿಧ ಸ್ಪರ್ಧೆಗಳನ್ನು ದಿನಾಂಕ 14.9.2024 ರಂದು ಮಕ್ಕಳಿಗೆ ನೃತ್ಯ, ಹಾಡು, ರಂಗೋಲಿ ಬಿಡಿಸುವುದು, ಭಾಷಣ ಮಾಡುವುದನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಫಾದರ ಸ್ಟ್ಯಾನಿ ಲೋಬೊ ಶ್ರೇಷ್ಠ ಗುರುಗಳು, ಕಲಬುರಗಿ ಧರ್ಮಕ್ಷೇತ್ರ ಇವರು ಆ ದೇವರಿಗೆ ಪ್ರಿಯವಾದದ್ದು ಕಮಲದ ಹೂವು ಅದರ ಜನ್ಮ ಸ್ಥಾನ ಕೆಸರು, ಮನುಷ್ಯನಿಗೆ ಪ್ರಿಯವಾದ ಪ್ರತಿಭೆಯನ್ನು ಆ ದೇವರು ಕರುಣಿಸಿದ್ದಾನೆ, ಆತನ ಆಶೀರ್ವಾದ ಸದಾ ನಿಮ್ಮ ಮೇಲೆ ಇರಲಿ ಎಂದು ಹೇಳಿದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶದರಿ ಶ್ರೀಮತಿ ರೇಣುಕಾ ಸ್ಲಂ ಜನಾಂದೋಲನ ಜಿಲ್ಲಾ ಸಂಚಾಲಕರು, ಮತ್ತು ಸೇವಾಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ ದೀಪಕ ರವರು ಮಕ್ಕಳು ಮತ್ತು ಎಲ್ಲಾ ಸಿಬಂದ್ದಿ ವರ್ಗದವರು ಪಾಲಗೋಂಡಿದರು,





# "ಉಜ್ಜೀವನ ಕಾರ್ಯಕ್ರಮ"

## "ರಾಸಯನಿಕ ಗೋಬ್ಬರ ಬಳಸದೆ ಸಾವಯವ ಗೋಬ್ಬರ ಬಳಸಿ"



ಸೆಪ್ಟೆಂಬರ್ 26ರಂದು ನಂದೂರ (ಕೆ) ಗ್ರಾಮಕ್ಕೆ ಭೇಟಿ ನೀಡಲಾಯಿತು, ಸೇವಾ ಸಂಗಮ ಸಂಸ್ಥೆಯ, ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಇಂದು ಅವರು ಸಮುದಾಯದ ರೈತಬಾಂದವರಿಗೆ ಮುಂಗಾರು ಬೆಳೆಗಳಿಗೆ ರಾಸಯನಿಕ ಗೋಬ್ಬರ ಬಳಸದೆ ಸಾವಯವ ಗೋಬ್ಬರ ಹಾಗೂ ಬ್ರಹ್ಮಾಸ್ತ್ರ ಮತ್ತು ಜಿವಾಮೃತ ಬಗ್ಗೆ 12 ಜನರಿಗೆ ಮಾಹಿತಿ ನೀಡಲಾಯಿತ್ತು. ಆ ರೈತರು ಅದನ್ನು ತಯಾರಿಸಿಕೊಂಡು ಬೆಳೆಗಳಿಗೆ ಸಿಂಪರಣೆ ಮಾಡಬೇಕು. ಇದ್ದರಿಂದ ಭೂಮಿಯ ಫಲವತಾತೆ ಮತ್ತು ಬೆಳೆಗಳ ಇಳುವರಿ ಹೆಚ್ಚುವುದರಿಂದ ಆ ಬೆಳೆಗಳಿಗೆ ಸೂಕ್ತ ಆಧಾರಿತ ಬೆಲೆಯು ಮಾರುಕಟ್ಟೆಯಲ್ಲಿ ದೊರೆಯುತ್ತದೆ ಎಂದು ತಿಳಿಸಲಾಯಿತ್ತು.

## "ಸ್ವಚ್ಚತೆ ಸೇವಾ ಸ್ವಬಾವ ಪ್ರತಿಜ್ಞೆ ಕಾರ್ಯಕ್ರಮ ಹಾಗೂ ಚಿತ್ರಕಲಾ ಸ್ಪರ್ಧೆ"



26 ಸೆಪ್ಟೆಂಬರ್ ರಂದು ಧರ್ಮಪುರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಯೋಜನೆ ಅಡಿಯಲ್ಲಿ ಕೃಷಿ ವಿಜ್ಞಾನ ಕೆಂದ್ರ ಕಲಬುರಗಿ ಸಂಯುಕ್ತ ಆಶ್ರಯದಲ್ಲಿ ಸ್ವಚ್ಚತೆ ಸೇವಾ ಸ್ವಬಾವ ಪ್ರತಿಜ್ಞೆ ಕಾರ್ಯಕ್ರಮ ಆಯೋಜಿಸಲಾಯಿತ್ತು. ಕೃಷಿ ವಿಜ್ಞಾನ ಕೇಂದ್ರದ ಕೃಷಿ ಬೇಸಾಯ ತಜ್ಞರಾದ ಶ್ರೀ ಯೂಸೂಫ ಮಾತನಾಡಿ ಮಕ್ಕಳಿಗೆ ಸ್ವಚ್ಚತೆಯ ಸ್ವಬಾವ ತಿಳಿಸಿದರು. ಹಾಗೂ ಡಾ// ಸನ್ಮತಿ ನಾಯಕ ಎ.ಟಿ.ಎಸ್ ರವರು ಸ್ವಚ್ಚತೆ ಸೇವಾ ಸ್ವಬಾವ ಪ್ರತಿಜ್ಞೆಯನ್ನು ಮಕ್ಕಳಲ್ಲಿ ಅರಿವು ಮೂಡಿಸಿದರು. ಮಕ್ಕಳಿಗೆ ಚಿತ್ರಕಲೆ ಸ್ಫರ್ಧೆಯನ್ನು ಆಯೋಜಿಸಲಾಯಿತು. ಪರಿಸರಕ್ಕೆ ಸಂಬಂದಿಸಿದ ಚಿತ್ರವನ್ನು ಬಿಡಿಸಲು ಮತ್ತು ಪರಿಸರದ ಬಗ್ಗೆ ಪ್ರಬಂಧ ಬರೆಯಲು ತಿಳಿಸಿದರು. ಸ್ಪರ್ಧೆಯಲಿ ಭಾಗವಹಿಸಿದ ಮಕ್ಕಳಿಗೆ ಪ್ರಥಮ ಸ್ಥನ, ದ್ವಿತಿಯ ಸ್ಥನ, ಮತ್ತು ತೃತಿಯ ಸ್ಥನ ಆಯ್ಕೆಮಾಡಿ ಬಹುಮಾನ ವಿತರಿಸಲಾಯಿತ್ತು. ಮಕ್ಕಳಿಗೆ ತಮ್ಮ ಮನೆಯ ಅಂಗಳದಲ್ಲಿ ಕೈತೋಟ ಮಾಡಲು 14 ತರಹದ ತರಕಾರಿ ಬೀಜಗಳನ್ನು ನೀಡಲಾಯಿತ್ತು. ಈ ಕಾರ್ಯಕ್ರಮದಲ್ಲಿ ಶಾಲೆಯ ಮಕ್ಕಳು, ಮುಖ್ಯ ಗುರುಗಳು, ಶಿಕ್ಷಕವೃಂದದವರು ಹಾಗೂ ಸ್ವಯಂ ಸೇವಕರಾದ ಶ್ರೀಮತಿ ಸಹಜ ಬೇಗಂ ಉಪಸ್ಥಿತರಿದ್ದರು.



## "ರೈತರ ಸರ್ವಾಂಗಿಣಯ ಅಭಿವೃದ್ದಿಯೇ......!! ನಮ್ಮ ಆದ್ಯತೆ"

ಸೆಪ್ಟೆಂಬರ್ 24ರಂದು ಪಾಣೆಗಾಂವ ಗ್ರಾಮಕ್ಕೆ ಭೇಟಿ ನೀಡಲಾಯಿತು, ಸೇವಾ ಸಂಗಮ ಸಂಸ್ಥೆಯ, ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತನಾದ ಶ್ರೀ ನವಿನರವರು ರೈತ ಬಾಂದವರನ್ನು ಉದ್ದೇಶಿ 8 ಜನ ರೈತರ ಹೋಲ ಭೆಟಿ ಮಾಡಿ ತೋಗರಿ ಬೆಳೆಯನ್ನು ವೀಕ್ಷಿಸಿ ಪರಿಶೀಲನೆ ಮಾಡಲಾಯಿತು, ರೈತರಿಗೆ ಅತಿ ಹೆಚ್ಚು ಮಳೆಯಿಂದಾಗಿ ಬೆಳೆಗಳಿಗೆ ಹಾನಿಯಾಗಿರುವುದರಿಂದ ಕೃಷಿ ಇಲಾಖೆಗೆ ಭೇಟಿ ನೀಡಿ, ಅಧಿಕಾರಿಗಳಿಗೆ ದಾಖಲಾತಿಗಳನ್ನು ನೀಡಿ "ಪ್ರಧಾನ ಮಂತ್ರಿ ಫಸಲ್ ಭೀಮ" ಯೋಜನೆ ಅಡಿಯಲ್ಲಿ ನೀಮ್ಮ ಹೋಲಗಳನ್ನು ಸರ್ವೆ ಮಾಡಿಸುವ ಮೂಲಕ ಬೆಳೆ ಪರಿಹಾರವನ್ನು ಪಡೆದುಕೋಳಲು 40 ಜನ ರೈತರಿಗೆ ಮಾಹಿತಿ ನೀಡಲಾಯಿತು, ಇದರಲ್ಲಿ 6 ಜನ ರೈತರು ಬೆಳೆಗಳಿಗೆ ಸರ್ವೆ ಮಾಡಿಸುವ ಮೂಲಕ ಹಣ ನಿಮ್ಮ ಖಾತೆಗೆ ಜಮಾ ಆಗುತ್ತದೆ ಎಂದು ತಿಳಿಸಲಾಯಿತ್ತು.





ಸಸೆಪ್ಟೆಂಬರ್ 18ರಂದು ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಯೋಜನೆ ಅಡಿಯಲ್ಲಿ ಸಂಯೋಜಕರಾ ದಚಂದ್ರಕಾಂತ ಮತ್ತು ಕಾರ್ಯಕರ್ತಳಾದ ಶ್ರೀಮತಿ ನಂದಿನಿ ರವರು ಕಲಬುರಗಿ ತಾಲೂಕಿನ ಸೀತನೂರ ಮತ್ತು ಧರ್ಮಪುರ ಗ್ರಾಮಕ್ಕೆ ಭೇಟಿ ಮಾಡಿ ತೋಟಗಾರಿಕೆಯ ಬೆಳೆಗಳನ್ನು ಪ್ರಸ್ತುತವಾಗಿ ಬೆಳೆ ಹಾನಿಯಾಗಿರುವ ಕಾರಣ ರೈತರ ಹೋಲ ಭೇಟಿ ಮಾಡಿ ಆರು ಜನ ರೈತರ ಜಿ.ಪಿ.ಎಸ ಭಾವಚಿತ್ರವನ್ನು ತೆಗೆದುಕೊಂಡು ತೋಟಗಾರಿಕೆ ಇಲಾಖೆಯ ಕಛೇರಿಗೆ ಕಳಿಸಲಾಯಿತ್ತು.



## “ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮ”

### “ಕ್ಯಾನ್ಸರ್ ಪ್ರಕಾರಗಳ ಕುರಿತು ಮಾಹಿತಿ”



ಸೆಪ್ಟೆಂಬರ್ 21ರಂದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪಾಣೆಗಾಂವ ಗ್ರಾಮದಲ್ಲಿ ಕಾನ್ಸರ್ ಜಾಗೃತಿ ಕಾರ್ಯಕ್ರಮ ಮಾಡಲಾಯಿತ್ತು. ಕ್ಯಾನ್ಸರ್ ರೋಗವು ಯಾರಿಗೆ ಬರುತ್ತದೆ. ಹೆಗೆ ಕ್ಯಾನ್ಸರ್ ತಡೆಗಟ್ಟಬಹುದು, ಕ್ಯಾನ್ಸರ್ ಪ್ರಕಾರಗಳ ಕುರಿತು ಮಾಹಿತಿ ನೀಡಿದರು. ಮತ್ತು ಕ್ಯಾನ್ಸರ್ ಹೆಗೆ ಹರಡುತ್ತದೆ ಎಂದರೆ ಮಾನವನ ಜೀವಕೋಶಗಳಿಂದ ಮಾಡಲ್ಪಟ್ಟಿದೆ. ಸಂಭವನೀಯ ಚಿಹ್ನೆಗಳು ಮತ್ತು ರೋಗ ಲಕ್ಷಣಗಳು ಒಂದು ಗಡ್ಡೆ ಅಸಹಜ ರಕ್ತಸ್ರಾವ, ಧೀರ್ಘಕಾಲದ ಕೆಮ್ಮು, ತೂಕ ನಷ್ಟ. ಈ ರೀತಿಯಾಗಿ ಕ್ಯಾನ್ಸರರೋಗವು ಬರುತ್ತದೆ. ಎಂದು 50 ಜನ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತ್ತು.

### “ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮ”

ಸೆಪ್ಟೆಂಬರ್ 30ರಂದು ಕಲಬುರಗಿ ತಾಲ್ಲೂಕಿನ ಹೆರೂರ ಗ್ರಾಮ ಪಂಚಾಯತನಲ್ಲಿ ತಾಲೂಕ ಪಂಚಾಯತ, ತಾಲೂಕ ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಲಬುರಗಿ ಹಾಗೂ ಸೇವಾ ಸಂಗಮ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಗ್ರಾಮ ಆರೋಗ್ಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ರಾಜಕುಮಾರ ಅವರು ಮಾತನಾಡಿ ಕ್ಯಾನ್ಸರ್ ರೊಗದ ಕುರಿತು ಮಾಹಿತಿಯನ್ನು ನೀಡಿದರು. ಈ ರೋಗದ ಗುಣಲಕ್ಷಣಗಳು, ರೋಗ ಬರಲು ಕಾರಣ, ಇದಕ್ಕೆ ಇರುವ ಸೂಪರ್ ಚಿಕಿತ್ಸೆಯ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಗಂಗುಬಾಯಿ ಬಿ.ಎಚ್.ಇ.ಓ., ಶ್ರೀ ಶರಣಪ್ಪಾ ಪಿ.ಡಿ.ಓ, ಗ್ರಾಮ ಪಂಚಾಯತ, ಆಧ್ಯಕ್ಷರು ಶ್ರೀಮತಿ ವೈಶಾಲಿ ಅಂಗನವಾಡಿ ಮೇಲ್ವಿಚಾರಕಿ ಹಾಗೂ ಗ್ರಾಮ ಪಂಚಾಯತ ಸದಸ್ಯರು ವೇದಿಕೆಯಲ್ಲಿ ಉಪಸ್ಥಿತರಿದರು. ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಆಶಾ ಕಾರ್ಯಕರ್ತೆಯರು ಗ್ರಾಮದ ಮುಖಂಡರು ಸೇರಿ 30 ಜನ ಭಾಗವಹಿಸಿ ಕಾರ್ಯಕ್ರಮದ ಮಾಹಿತಿಯನ್ನು ಪಡೆದುಕೊಂಡರು.





# "ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯಕ್ರಮಗಳು"

## ಆರ್ಬಿಟ್ ಸಂಸ್ಥೆ ವತಿಯಿಂದ ರಕ್ತ ದಾನ ಶಿಬಿರ :ಹುಮನಾಬಾದ.





ಹುಮನಾಬಾದ : ಪಟ್ಟಣದ ಆರ್ಬಿಟ್ ಸಂಸ್ಥೆ ಪ್ರಾಂಗಣದಲ್ಲಿ ನಡೆದ
ರಕ್ತದಾನ ಶಿಬಿರದ ದಿವ್ಯ ಸಾನಿಧ್ಯ ವಹಿಸಿದ, ಗುಲ್ಬರ್ಗ ಧರ್ಮ ಕ್ಷೇತ್ರದ ಶ್ರೇಷ್ಠ ಗುರುಗಳಾದ ಫಾದರ್ ಸ್ವಾನಿ ಲೋಬೊ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ. ಮನುಷ್ಯ ಮನುಷ್ಯನಿಗೆ ಸಹಾಯ ಮಾಡುವುದೇ ಮಾನವೀಯತೆಯ ಧರ್ಮ. ಸಂಕಷ್ಟದಿಲ್ಲಿರುವವರನ್ನು ಕಂಡು ಕನಿಕರ ಪಟ್ಟು ಅವರ ಸಂಕಷ್ಟದಲ್ಲಿ ಭಾಗಿಯಾಗುವುದೇ ಮಾನವೀಯತೆ. ಹಾಗಾಗಿ ಪ್ರತಿಯೊಬ್ಬರೂ ಮಾನವೀಯತೆಯ ದೃಷ್ಟಿಕೋನವನ್ನು ಇಟ್ಟುಕೊಂಡು ಪರೋಪಕಾರಿಯಾಗಿ, ಸ್ವಯಂ ಪ್ರೇರಿತವಾಗಿ ರಕ್ತದಾನ ಶಿಬಿರದಲ್ಲಿ ಮುಕ್ತವಾಗಿ ಭಾಗವಹಿಸುವಂತೆ ಬಂದಂತಹ ರಕ್ತದಾನಿಗಳನ್ನು ಉದ್ದೇಶಿಸಿ ಮಾತನಾಡಿದರು.
ಆರ್ಬಿಟ್ ಸಂಸ್ಥೆಗಳು ಸುಮಾರು ೩೦ ವರ್ಷಗಳಿಂದ ಬೀದರ್ ಕ್ಷೇತ್ರಾದ್ಯಂತ ಉತ್ತಮ ಸಮಾಜ ಸೇವೆ ಮಾಡಿಕೊಂಡು ಬರುತ್ತಿದೆ. ದೀನ, ದಲಿತರು, ದಿಕ್ಕಿಲ್ಲದವರಿಗಾಗಿ ಹಗಲಿರುಳು ದುಡಿಯುತ್ತಿರುವ ಸಂಸ್ಥೆ, ಸಮುದಾಯದಿಂದ ಅಂಚಿಕೆ ತಳಲ್ಪಟ್ಟಂತಹ ಜನರನ್ನು ಪುನಹ: ಸಮುದಾಯಕ್ಕೆ ಸೇರಿಸುವ ಉತ್ತಮ ಕಾರ್ಯದಲ್ಲಿ ಸಂಸ್ಥೆ ತೊಡಗಿಸಿಕೊಂಡಿದೆ. ಇಂದು ಬೀದರ್ ಕ್ಷೇತ್ರದಲ್ಲಿ ಸಂಸ್ಥೆಯ ಹೆಸರು ಕೇಳದವರಿಲ್ಲ, ಪ್ರತಿಯೊಂದು ಗ್ರಾಮ, ಕುಟುಂಬದ ಜನರಿಗೆ ಸಂಸ್ಥೆಯು ಚಿರಪರಿಚಿತವಾದುದ್ದು, ಇಂದು ನಾವೆಲ್ಲರೂ ರಕ್ತದಾನ ಶಿಬಿರದ ಪ್ರಯುಕ್ತ ಕೂಡಿ ಬಂದಿದ್ದೇವೆ, ದಾನಗಳಲ್ಲಿಯೇ ಮಹಾದಾನ ರಕ್ತದಾನವೆಂದು ಹೇಳಲಾಗುತ್ತದೆ, ರಕ್ತದಾನ ಮಾಡುವ ಮೂಲಕ ಸಂಕಷ್ಟದಲ್ಲಿರುವವರ ಜೀವವನ್ನು ಉಳಿಸುವಂತಹ ಶಕ್ತಿ ಈ ರಕ್ತದಾನಕೆ ಇದೆ ಎಂದು ನುಡಿದರು. ಜನರು ರಕ್ತದಾನ, ನೇತ್ರದಾನ, ಶರೀರದ ಇನ್ನಿತರ ಭಾಗಗಳ ದಾನ ಮಾಡುವ ಮೂಲಕ ಸಂಕಷ್ಟದಲ್ಲಿರುವ ಜನರಿಗೆ ಸಹಾಯ ಮಾಡುವ ಗುಣ ಪ್ರತಿಯೊಬ್ಬ ನಾಗರಿಕರಲ್ಲಿ ಇರಬೇಕು. ಎಷ್ಟೇ ಆಸ್ತಿ, ಹಣವಿದ್ದರೂ ಸಂಕಷ್ಟದ ಸಮಯದಲ್ಲಿ ರಕ್ತದ ಅಗತ್ಯವಿದ್ದಾಗ ಪರದಾಡುವ ಪರಿಸ್ಥಿತಿ ಎದುರಾಗುತ್ತದೆ. ಅಂತಹ ಪರಿಸ್ಥಿತಿಗಳನ್ನು ಸಮರ್ಥವಾಗಿ ಎದುರಿಸಬೇಕಾದರೆ ಪ್ರತಿಯೊಬ್ಬರು ರಕ್ತದಾನ ಮಾಡುವ ಮೂಲಕ ಸಮಾಜಕ್ಕೆ ಮಾದರಿ ಹಾಗೂ ಸಹಕಾರಿಯಾಗಿ ಹೆಜ್ಜೆ ಇಡುವ ಅಗತ್ಯವಿದೆ ಎಂದು ಪ್ರಾಸ್ತವಿಕವಾಗಿ ಮಾತನಾಡಿದ ಹುಮ್ನಾಬಾದ್ ತಾಲೂಕಿನ ಮುಖ್ಯ ವೈದ್ಯಾಧಿಕಾರಿಗಳಾದ ಡಾ. ನಾಗನಾಥ್ ಹುಲಸೂರೆ ನುಡಿದರು.
ಆರ್ಬಿಟ್ ಸಮಾಜ ಸೇವಾ ಸಂಸ್ಥೆ ಮತ್ತು ಐಸಿಐಎಂಆರ್ ಗುಲ್ಬರ್ಗ ಧರ್ಮ ಕ್ಷೇತ್ರ ಹಾಗೂ ಬ್ರಿಮ್ಸ್ ಬೋಧನ ಹಾಗೂ ಸಂಶೋಧನಾ ಆಸ್ಪತ್ರೆಯ ರಕ್ತ ನಿಧಿ ಘಟಕದ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಯಿತು.
ಸಂಸ್ಥೆಯ ನಿರ್ದೇಶಕರಾದ ವಂದನೀಯ ಫಾ|| ವಿಕ್ಟರ್ ವಾಸ ಅವರು ಮಾತನಾಡಿ, ಸಂಸ್ಥೆ ಸುಮಾರು ೩೦ ವರ್ಷಗಳಿಂದ ಸಮಾಜಮುಖಿಯಾಗಿ ಕೆಲಸ ಮಾಡಿಕೊಂಡು ಬರುತ್ತಿದೆ. ಇಂದು ಸಂಸ್ಥೆಯ ಪಾಲಕಿಯಾದ ಸಂತ ಮದರ್ ತೆರೇಸಾರವರ ಪುಣ್ಯ ಸ್ಮರಣೆಯ ದಿನದ ಸ್ಮರಣಾರ್ಥವಾಗಿ ಇಂದು ಸಂಸ್ಥೆಯಲ್ಲಿ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ, ಸಂತ ಮದರ್ ತೆರೇಸಾ ಅವರ ಸೇವೆಯ ಮೌಲ್ಯವನ್ನು ನಮ್ಮ ಸಂಸ್ಥೆಯು ಅಳವಡಿಸಿಕೊಂಡು ಸಮಾಜ ಸೇವೆಯ ಮಾಡುವದೆ ನಮ್ಮ ಸಂಸ್ಥೆಯ ಮುಖ್ಯ ಧ್ಯೇಯವಾಗಿದೆ, ಜಾತಿ ಧರ್ಮದ ಬೇಧ ಭಾವವಿಲ್ಲದೆ ಸಮಾಜದಿಂದ ಅಂಚಿಗೆ ತಳಲ್ಪಟ್ಟವರನ್ನು ಪುನ ಸಮುದಾಯಕ್ಕೆ ಸೇರಿಸುವುದೇ ಸಂಸ್ಥೆಯ ಪರಮ ಗುರಿಗಳಲ್ಲೊಂದಾಗಿದೆ ಎಂದು ನುಡಿದರು.

ಬ್ರಿಮ್ಸ್ ಆಸ್ಪತ್ರೆಯ ರಕ್ತ ನಿಧಿ ಘಟಕದ ಡಾ|| ವೀರೇಂದ್ರ ಪಾಟೀಲ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು ರಕ್ತವನ್ನು ಸಂಗ್ರಹಿಸುವ ಕಾರ್ಯ ಮಾಡಿದರು,
ಈ ಸಂದರ್ಭದಲ್ಲಿ ಡಾ|| ಸಂಗೀತ ಹುಲಸೂರೆ, ಗುಲ್ಬರ್ಗ ಧರ್ಮ ಕ್ಷೇತ್ರದ ಯುವ ನಿರ್ದೇಶಕರಾದ ಫಾ|| ಸಚಿನ್ ಕ್ರಿಸ್ಟಿ, ಫಾ|| ವಿನ್ಸೆಂಟ್ ಪೇರೇರಾ, ಫಾ|| ಬಾಪು, ಫಾ|| ಕ್ಲಾರಿ, ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ವಂದನೀಯ ಫಾ|| ವಿಜಯ, ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ೮೫ ಜನ ರಕ್ತದಾನ ಮಾಡುವ ಮೂಲಕ ಮಾನವೀಯತೆಯನ್ನು ಮೆರೆದರು.
ಶ್ರೀಮತಿ ನಿರ್ಮಲಾ, ಅಮಿತಾ ಪ್ರಾರ್ಥಿಸಿ, ಅರುಣ ಕುಮಾರ್ ರಂಜೇರಿ ಸ್ವಾಗತಿಸಿ, ಶ್ರೀಮತಿ ರೀಟ ನಿರೂಪಿಸಿ, ಶ್ರೀಮತಿ ಸವಿತಾ ವಂದಿಸುವುದರೊAದಿಗೆ ಕಾರ್ಯಕ್ರಮಕ್ಕೆ ತೆರೆ ಎಳೆಯಲಾಯಿತು.

## ಒಂದು ದಿನ ತರಬೇತಿ ಶಿಬಿರ : ಆರ್ಬಿಟ್ ಮತ್ತು ಅಜಿಮ್ ಪ್ರೇಮಾಜಿ ಸಂಯುಗದಲ್ಲಿ.





ಹುಮನಾಬಾದ : ಸೆಪ್ಟೆಂಬರ್ 21ರಂದು ನಗರದ ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಹಾಗೂ ವಿಕಲಚೇತನರ ತಾಲೂಕ ಗುಂಪು ರಚನೆ ಮಾಡುವ ಉದ್ದೇಶದಿಂದ ಒಂದು ದಿನದ ತರಬೇತಿ ಕಾರ್ಯ ಗೌರವವನ್ನು ಹಮ್ಮಿಕೊಳ್ಳಲಾಯಿತು.
ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿರುವಂತಹ ಪ್ರವೀಣ್ ತಾಲೂಕ ಸಂಯೋಜಕರು APF ಸಂಸ್ಥೆ, ಇವರು ತರಬೇತಿಯನ್ನು ನೀಡುತ್ತಾ ವಿಕಲಚೇತನರಿಗೆ ಯಾವೆಲ್ಲ ಕ್ಷೇತ್ರಗಳಲ್ಲಿ ಹಾಗೂ ಸೌಲಭ್ಯಗಳ ಕುರಿತು ಮಾಹಿತಿಯನ್ನು ನೀಡಿದರು ಮತ್ತು ತಮ್ಮ ಹಕ್ಕುಗಳಿಗಾಗಿ ಹೇಗೆ ಹೋರಾಡಬೇಕೆಂದು ಈ ತರಬೇತಿಯಲ್ಲಿ ಸೂಕ್ಷ್ಮವಾಗಿ ತಿಳಿಸಲಾಯಿತು,

ನಂತರ ನವಜೀವನ ಕಾರ್ಯಕ್ರಮದ ಸಂಯೋಜಕರಾದ ಪ್ರವೀಣ್ ಮಾತನಾಡಿ ತರಬೇತಿ ನೀಡುತ್ತಾ ಅಂಬೇಡ್ಕರ್ ಅವರು ಪಾಡಿಸಿರುವ ಶಿಕ್ಷಣ ಸಂಘಟನೆ ಮತ್ತು ಹೋರಾಟ ಎಂಬ ತತ್ವವನ್ನು ಸ್ಮರಿಸುತ್ತಾ ತಾವೆಲ್ಲರೂ ಸದ್ಯಕ್ಕೆ ಜ್ಞಾನವೆಂಬ ಆಯುಧದ ಜೊತೆಗೆ ಸಂಘಟನೆ ಮಾಡಲು ಮುಂದಾಗಿದರಿ ಹೀಗೆ ನೀವು ಮುಂದುವರೆಯುತ್ತಾ ನಿಮ್ಮ ಸಮಸ್ಯೆಗಳ ಸಲುವಾಗಿ ನಮ್ಮ ಹಕ್ಕಿಗಾಗಿ ನಾವು ಹೋರಾಟ ಮಾಡಿದರೆ ಖಂಡಿತ ಪರಿಹಾರ ದೊರಕುವುದು ಎಂದು ಫಲಾನುಭವಿಗಳಲ್ಲಿ ಅರಿವು ಮೂಡಿಸಿದರು.

ಈ ಸಂಧರ್ಭದಲ್ಲಿ ಸಂಸ್ಥೆಯ ನಿರ್ದೇಶಕರಾದ ಒಂದನೇ ಫಾದರ್ ವಿಕ್ಟರ್ ವಾಸ ಅವರು ಎರಡು ಕೈಯಿಂದ ಚಪ್ಪಾಳೆ ಬಾರಿಸಿದರೆ ಸದ್ದು ಹೇಗೆ ಬರುವುತ್ತದೆಯೋ ಹಾಗೆ ನೀವು ನಮ್ಮ ಕೈ ಜೋಡಿಸಿದರೆ ಉತ್ತಮ ಸಮಾಜ ಮತ್ತು ವ್ಯವಸ್ಥೆಯನ್ನು ಬದಲಿಸಲು ಸಾಧ್ಯ ಎಂದು ಸಲಹೆ ನೀಡಿದರು.

ಈ ಸಂಧರ್ಭದಲ್ಲಿ ಬಿ ಆರ್ ಸಿ ಶ್ರೀಮತಿ ಚಂದ್ರಕಲಾ, ಶ್ರೀ ಬಿಲಾಲ್, ಎಪಿಎಫ್ ಸಂಸ್ಥೆಯ ಪ್ರತಿನಿಧಿಗಳಾದ ವೀರೇಶ್ ,ಆರ್ಬಿಟ್ ಸಂಸ್ಥೆಯ ನಿರ್ದೇಶಕರು, ಸಿಬ್ಬಂದಿ ವರ್ಗದವರು ಹಾಗೂ 70 ಜನ ಫಲಾನುಭವಿಗಳು ಭಾಗವಹಿಸಿದರು.



ಹುಮನಾಬಾದ್‌ನ ಆರ್ಬಿಟ್ ಸಂಸ್ಥೆಯಲ್ಲಿ ಮದರ್ ತರೇಸಾ ಸ್ಮರಣಾರ್ಥ ಮಂಗಳವಾರ ರಕ್ತಾಯಣ 2024ರ ನಿಮಿತ್ತ ರಕ್ತದಾನ ಶಿಬಿರ ಜರುಗಿತು.

## 'ರಕ್ತದಾನ ಆರೋಗ್ಯ ಸುಧಾರಣೆಗೆ ಪೂರಕ'

**ಸಂ.ಕ.ಸಮಾಚಾರ ಹುಮನಾಬಾದ:** ಕೆಲವರಲ್ಲಿ ರಕ್ತದಾನ ಮಾಡುವುದರಿಂದ ದೇಹದಲ್ಲಿ ನಿಶಕ್ತಿ ಉಂಟಾಗುತ್ತದೆ ಎಂಬ ತಪ್ಪು ಕಲ್ಪನೆ ಇದೆ. ವಾಸ್ತವಿಕವಾಗಿ ರಕ್ತದಾನ ಮಾಡುವುದರಿಂದ ದೇಹದಲ್ಲಿ ಹಳೆ ರಕ್ತಹೋಗಿ ಹೊಸ ರಕ್ತ ಉತ್ಪತ್ತಿಗೆ ಪೂರಕವಾಗುತ್ತದೆ ಎಂದು ಸರ್ಕಾರಿ ಆಸ್ಪತ್ರೆ ಮುಖ್ಯ ಆರೋಗ್ಯ ಅಧಿಕಾರಿ ಡಾ.ನಾಗನಾಥ ಹುಲಸೂರೆ ಅಭಿಪ್ರಾಯಪಟ್ಟರು. ಇಲ್ಲಿಯ ಆರ್ಬಿಟ್ ಸಂಸ್ಥೆಯಲ್ಲಿ ಮದರ್ ತೆರೇಸಾ ಸ್ಮರಣಾರ್ಥ ರಕ್ತಾಯಣ ಅಂಗವಾಗಿ ಮಂಗಳವಾರ ಏರ್ಪಡಿಸಿದ ರಕ್ತದಾನ ಶಿಬಿರದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು. ಮನುಷ್ಯನ ದೇಹದಲ್ಲಿ ಒಂದು ಬಾರಿ ಉತ್ಪತ್ತಿಯಾದ ರಕ್ತ 6 ತಿಂಗಳ ಕಾಲ ಜೀವಂತವಾಗಿತ್ತದೆ. ನಂತರ ಅದು ತನ್ನ ಅಸ್ತಿತ್ವ ಕಳೆದುಕೊಂಡು ದೇಹದಲ್ಲಿ ಹೊಸ ರಕ್ತ ಉತ್ಪತ್ತಿಗೆ ಕಾರಣವಾಗುತ್ತದೆ ಎಂದು ಹೇಳಿದರು. ಕಲ್ಬುರ್ಗಿ ಧರ್ಮ ಪ್ರಾಂತದ ಶ್ರೇಷ್ಠ ಧರ್ಮಗುರು ಫಾದರ್ ಸ್ವಾನಿ ಲೊಬೊ ಮಾತನಾಡಿ ರಕ್ತದಾನ ಯಾರೊಬ್ಬರ ಒತ್ತಡಕ್ಕೆ ಮಣಿದು ರಕ್ತದಾನ ಮಾಡದೇ ಸ್ವಯಂ ಪ್ರೇರಿತರಾಗಿ ರಕ್ತದಾನವನ್ನು ಮಾಡಬೇಕೆಂದು ಸಲಹೆ ನೀಡಿದರು.
ಆರ್ಬಿಟ್ ಸಂಸ್ಥೆ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ಆರ್ಬಿಟ್ ಸಂಸ್ಥೆ ನಡೆದು ಬಂದ ದಾರಿ, ಈ ವರೆಗೆ ಹಮ್ಮಿಕೊಂಡ ಜನೋಪಯೋಗಿ ಕಾರ್ಯ ಚಟುವಟಿಕೆಗಳನ್ನು ವಿವರಿಸಿದರು. ಡಾ.ವಿರೇಂದ್ರ ಪಾಟೀಲ್, ಡಾ.ಸಂಗೀತಾ ಹುಲಸೂರೆ, ಡಾ.ಸಚ್ಚಿನ್ .ಕ್ರಿಸ್ತಿ, ವಿನ್ಸೆಂಟ್ ಪೆರೇರ್, ಫಾ.ಬಾಪು, ಕ್ಲಾರಿ, ಫಾದರ್ ವಿಜಂಯ, ನಿರ್ಮಲಾ, ಅಮೀತ, ಅರುಣ, ರೀಟಾ, ಸವೀತಾ ಮೊದಲಾದವರಿದ್ದರು. ಈ ವೇಳೆ ಒಟ್ಟು 82 ಜನ ರಕ್ತದಾನ ಮಾಡಿದರು.

ಪ್ರಜಾವಾಹಿನಿ

## ಕಲಿತ ವಿದ್ಯೆ ಎಂದಿಗೂ ವ್ಯರ್ಥವಾಗಬಾರದು



● ಪ್ರಜಾವಾಹಿನಿ–ಬಿರಾದ

ತಾಲೂಕಿನ ಉಜನಿ ಕ್ರಿಸ್ತ ರಾಜ ದೇವಾಲಯ ಕಾರ್ಯಸೌಧದಲ್ಲಿ ನಿನ್ನೆ ಆರ್ಬಿಟ್ ಸಂಸ್ಥೆ ಸಹಯೋಗದಲ್ಲಿ ಟೈಲರಿಂಗ್ ಮತ್ತು ಕಂಪ್ಯೂಟರ್ ತರಬೇತಿ ಸಮಾರೋಪ ಮತ್ತು ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಕಾರ್ಯಕ್ರಮ ಜರುಗಿತು.
ಕಲಿತ ವಿದ್ಯೆ ಎಂದಿಗೂ ವ್ಯರ್ಥವಾಗಬಾರದು. ಎರಡು ತಿಂಗಳುಗಳ ಕಾಲ ಆರ್ಬಿಟ್ ಸಂಸ್ಥೆ ಎಲ್ಲ ಶಿಬಿರಾರ್ಥಿಗಳಿಗೆ ಗ್ರಾಮೀಣ ಭಾಗದಲ್ಲಿ ಅವರ ಏಳಿಗೆಗಾಗಿ ಉತ್ತಮ ಕೌಶಲ್ಯ ಉಪಾಯ ಕಲಿಸಿಕೊಟ್ಟಿದೆ. ಎಲ್ಲರು ಅದರ ಸದುಪಯೋಗ ಮಾಡಿಕೊಂಡು ಮುಂದೆ ಬರಬೇಕು ಎಂದು ಉಜನಿ ಕ್ರೀಸ್ತ ರಾಜ ದೇವಾಲಯ ನಿರ್ದೇಶಕ ಫಾದರ್ ಸುನೀಲ್ ಅಂಡ್ರೋದೆ ಹೇಳಿದರು.
ತಾಲೂಕಿನ ಉಜನಿ ಕ್ರೀಸ್ತ ರಾಜ ದೇವಾಲಯ ಕಾರ್ಯಸೌಧದಲ್ಲಿ ಆರ್ಬಿಟ್ ಸಂಸ್ಥೆ ಸಹಯೋಗದಲ್ಲಿ ಟೈಲರಿಂಗ್ ಮತ್ತು ಕಂಪ್ಯೂಟರ್ ತರಬೇತಿ ಸಮಾರೋಪ ಮತ್ತು ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಮಹಿಳೆಯರು ಮತ್ತು ಯುವತಿಯರು ತಮ್ಮ ಕೌಶಲ್ಯವನ್ನು ಜಗತ್ತಿಗೆ ಪ್ರದರ್ಶಿಸಬೇಕು. ಉತ್ತಮ ಕಲೆಯಿಂದ ತಮ್ಮ ಜೀವನದ ಧಾರಿ ಕಂಡುಕೊಳ್ಳಬೇಕು ಎಂದರು.
ಸಂತಪುರ ದೀಪಾಲಯ ಸಮಾಜ ಸೇವಾ ಸಂಸ್ಥೆ ಮುಖ್ಯಸ್ಥೆ ಸಿಸ್ಟರ್ ಲಿನೇಟ್ ಮಾತನಾಡಿ, ಸುಮಾರು 30 ವರ್ಷಗಳಿಗಿಂತ ಹೆಚ್ಚಿನ ವರ್ಷಗಳಿಂದ ಆರ್ಬಿಟ್ ಸಂಸ್ಥೆ ಗ್ರಾಮೀಣ ಭಾಗದ ಅನೇಕ ಮಹಿಳೆಯರ ಜೀವನೋಪಾಯ ಆರ್ಥಿಕವಾಗಿ ಸದೃಢಗೊಳಿಸಲು ಶ್ರಮಿಸುತ್ತಿದೆ. ಎಲ್ಲರು ಇದರ ಸದುಪಯೋಗಮಾಡಿಕೊಂಡು ಬದುಕು ಕಟ್ಟಿಕೊಳ್ಳುವ ಕೆಲಸಕ್ಕೆ ಮುಂದಾಗಬೇಕು ಎಂದರು.
ಇದೇ ವೇಳೆ ಟೈಲರಿಂಗ್ ಮತ್ತು ಕಂಪ್ಯೂಟರ್ ಕಲಿತ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.
ಫಾದರ್ ವಿಜಯ, ಹುಮನಬಾದ್ ಆರ್ಬಿಟ್ ಸಂಸ್ಥೆ ಸಹಾಯಕ ನಿರ್ದೇಶಕ ಫಾದರ್ ಕ್ರಿಸ್ಟೋಫರ್, ಸಿಸ್ಟರ್ ರೀಮಾ, ಸಿಸ್ಟರ್ ಕವಿತಾ ಇತರರಿದ್ದರು.

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

## TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್
ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

Name : Sevasangama Development Society
Account No : 16040100022902
IFSC Code : FDRL0001604
Bank : Federal Bank
Branch : Super Market Kalaburagi

Fr. Victor Anil Vas
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in